ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 16 | ಏಪ್ರಿಲ್ 19, 1981 | ಬೆಲೆ : 50 ಪೈಸೆ

ಜನತಂತ್ರ ರಕ್ಷಣೆ

ಕರ್ನಾಟಕ ರಾಜ್ಯದ ಗುಂಡೂರಾಯರ ಕಾಂಗ್ರೆಸ್ ಸರಕಾರವು ಕೇಂದ್ರದಲ್ಲಿರುವ ಇಂದಿರಾಗಾಂಧಿ ಸರಕಾರಕ್ಕಿಂತಲೂ ತೀವ್ರಗತಿಯಲ್ಲಿ ಪ್ರಜಾಪ್ರಭುತ್ವ ಹಕ್ಕುಗಳನ್ನು ಮತ್ತು ಸಂಘಟನೆಗಳನ್ನು ಹತ್ತಿಕ್ಕುತ್ತಲಿದೆ. ರಾಜ್ಯದಲ್ಲಿ ತೀವ್ರಗತಿಯಿಂದ ಬೆಳೆಯುತ್ತಲಿರುವ ಕಾರ್ಮಿಕರ ಮತ್ತು ರೈತರ ಹೋರಾಟ, ಜನತೆಯ ಹೋರಾಟಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಮುಂಚೂಣಿಯಲ್ಲಿರುವುದು-ಇವನ್ನೆಲ್ಲಾ ಸಹಿಸದೆ ಅರೆ ಫ್ಯಾಸಿಸ್ಟ್ ಧಾಳಿಗಳ ಮೂಲಕ ಪ್ರತಿಭಟನೆ ಮತ್ತು ವಿರೋಧ ಪಕ್ಷ ಹಾಗೂ ಜನಸಂಘಟನೆಗಳನ್ನು ಹತ್ತಿಕ್ಕಲಾಗುತ್ತಿದೆ.

ಬೆಂಗಳೂರಲ್ಲಿ ಕಾಂಗ್ರೆಸ್ ಗೂಂಡಾಗಳಿಂದ ಮುಖ್ಯ ಪತ್ರಿಕಾ ಕಛೇರಿಗಳ ಮೇಲೆ ಧಾಳಿ, ಲಂಕೇಶರ ಮೇಲೆ ಹಲ್ಲೆ, ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಮುಖಂಡರ ಮೇಲೆ ಹಲ್ಲೆ, ಮೈಕೋ ಯೂನಿಯನ್ನು ಕಛೇರಿಯನ್ನು ಬಲಾತ್ಕಾರದಿಂದ ಸ್ವಾಧೀನಪಡಿಸಿರುವುದು, ಕಾಂಗ್ರೆಸ್ (ಯು) ಕಛೇರಿಯ ಮೇಲೆ ಧಾಳಿ, ಇವೆಲ್ಲಾ ನಡೆಯುವಾಗ ಪೋಲೀಸು ಮತ್ತು

ಸಂಪಾದಕೀಯ

ಸರಕಾರಿ ಯಂತ್ರವು ಗೂಂಡಾಗಳಿಗೆ ಕೊಡುವ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಸಹಾಯ- ಇವೆಲ್ಲಾ ಆಳುವ ಪಕ್ಷವು ನಡೆಯುವ ರೀತಿ, ನೀತಿಗಳನ್ನು ಎತ್ತಿತೋರಿಸುತ್ತಿವೆ.

ಬಂಗಾಳ, ಕೇರಳಗಳಲ್ಲಿ ಕಾನೂನು ವ್ಯವಸ್ಥೆ ಬಗ್ಗೆ ಹಾಹಾಕಾರ ಎಬ್ಬಿಸುವ ಕಾಂಗ್ರೆಸ್ ರಾಜ್ಯಸರಕಾರಗಳು ಇರುವಲ್ಲೆಲ್ಲಾ ಕಾನೂನು ವ್ಯವಸ್ಥೆಯೇ ಇಲ್ಲ; ಜನರ ಜೀವಕ್ಕೆ ಬೆಲೆಯೇ ಇಲ್ಲ. ಕಳೆದ ಹದಿನಾಲ್ಕು ತಿಂಗಳುಗಳ ಕಾಲದಲ್ಲಿ ಗುಂಡೂರಾಯರ ಸರಕಾರವು 60ಕ್ಕಿಂತಲೂ ಹೆಚ್ಚು ಜೀವಗಳನ್ನು ಬಲಿತೆಗೆದುಕೊಂಡಿದೆ. ಜನತೆಯ ಸಮಸ್ಯೆಗಳ ಪರಿಹಾರಕ್ಕೆ ಬದಲು, ಜನರ ಹೋರಾಟಗಳನ್ನು ದಮನಮಾಡಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಏಪ್ರಿಲ್ 12ರಂದು ಬೆಂಗಳೂರಿನಲ್ಲಿ ಜರುಗಿದ "ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ಸಮಾವೇಶ"ವು ಸಮಯೋಚಿತವೂ, ಚಾರಿತ್ರಿಕವೂ ಆಗಿದೆ. ಕಾರ್ಮಿಕಸಂಘಟನೆಗಳು, ವಿದ್ಯಾರ್ಥಿ ಯುವಜನ ಸಂಘಟನೆಗಳು ಮತ್ತು ಬುದ್ಧಿಜೀವಿಗಳು ಹಾಗೂ ಸಿ.ಪಿ.ಐ.,

(ಕಡೇ ಪುಟ ನೋಡಿ)

ಕನಿಷ್ಠ ವೇತನಗಳಿಗೆ ಸಂಬಂಧಿಸಿ

ಏ. ೨೬ರಂದು ಬೆಂಗಳೂರಿನಲ್ಲಿ ಕಾರ್ಮಿಕರ ಸಮಾವೇಶ

ರಾಜ್ಯದ ವಿವಿಧ ಕೈಗಾರಿಕೆಯಲ್ಲಿ ದುಡಿಯುತ್ತಿರುವ ಲಕ್ಷಾಂತರ ಅಸಂಘಟಿತ ಕಾರ್ಮಿಕರನ್ನು ಸಂಘಟಿತರನ್ನಾಗಿ ಮಾಡುವ ದಿಶೆಯಲ್ಲಿ ಬೆಂಗಳೂರಿನಲ್ಲಿ ಏ. 26ರಂದು ಕನಿಷ್ಠ ವೇತನಗಳಿಗೆ ಸಂಬಂಧಿಸಿ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ. ಕೇಂದ್ರ ಕಾರ್ಮಿಕ ಸಂಘಟನೆಗಳಾದ ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ. ಮತ್ತು ಎಚ್.ಎಂ.ಎಸ್.ಗಳು ಈ ಸಮಾವೇಶದ ಹೊಣೆ ಹೊತ್ತುಕೊಂಡಿವೆ. ಕನಿಷ್ಠ ಕೂಲಿ ಜಾರಿಯಲ್ಲಿರುವ ಕೈಗಾರಿಕೆಗಳಲ್ಲಿ ಕನಿಷ್ಠ ಕೂಲಿಯನ್ನು ಪರಿಷ್ಕರಿಸುವಂತೆ, ಕನಿಷ್ಠಕೂಲಿ ಅನ್ವಯವಾಗದಿರುವ ಕೈಗಾರಿಕೆಗಳ ಕಾರ್ಮಿಕರಿಗೆ ಕನಿಷ್ಠ ಕೂಲಿ ಅನ್ವಯ ಮಾಡುವಂತೆ ಒತ್ತಾಯಿಸುವದು ಈ ಸಮಾವೇಶದ ಉದ್ದೇಶ.

ಕರ್ನಾಟಕ ಸರ್ಕಾರ ಬೇರೆ ಬೇರೆ ಕೈಗಾರಿಕಾ ಕಾರ್ಮಿಕರಿಗೆ ನಿಗದಿ ಪಡಿಸಿದ ಕನಿಷ್ಠ ಕೂಲಿ ಅತಿ ಕಡಿಮೆ ಇದೆ. ಮತ್ತ ಒಂದೇ ಮಟ್ಟದಲ್ಲಿಲ್ಲ. ಜೀವನಾವಶ್ಯಕ ವಸ್ತುಗಳ ಬೆಲೆ ಗಗನಕ್ಕೇರಿ ಬೆಲೆ ಸೂಚ್ಯಂಕದಲ್ಲಿ ಏರಿಕೆಯಾಗಿದ್ದರೂ ಅನೇಕ ವರ್ಷಗಳಿಂದ ಕನಿಷ್ಠ ಕೂಲಿಯನ್ನು ಪರಿಷ್ಕರಿಸಿಲ್ಲ.

ಸಮಾವೇಶ ನಡೆಸಲು ಸಿದ್ಧತಾ ಸಮಿತಿಯೊಂದನ್ನು ರಚಿಸಲಾಗಿದ್ದು ಕಾಂ.ಟಿ.ಎಸ್.ಅನಂತರಾಂ (ಸಿ.ಐ.ಟಿ.ಯು.), ಕಾಂ. ಬಾಬೂ ಮ್ಯಾಥ್ಯೂ (ಎ.ಐ.ಟಿ.ಯು.ಸಿ.)ಮತ್ತುಕಾಂ.ಎಂ.ವಿ. ಚಂದ್ರಶೇಖರ (ಎಚ್.ಎಂ.ಎಸ್.) ಇವರುಗಳು ಸಂಚಾಲಕರಾಗಿದ್ದಾರೆ. 26-4-81ರಂದು ಬೆಂಗಳೂರಿನಲ್ಲಿ ನಡೆಯಲಿರುವ ಈ ಸಮಾವೇಶದಲ್ಲಿ ರಾಜ್ಯದಾದ್ಯಂತದಿಂದ 300ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ. ಸಿದ್ಧತಾ ಸಮಿತಿಯು ಸಮಾವೇಶಕ್ಕೆ ಸರ್ವ ಸಿದ್ಧತೆಗಳನ್ನು ನಡೆಸುತ್ತಿದ್ದು ಈ ಕೆಳಕಂಡ ಬೇಡಿಕೆಗಳ ಪಟ್ಟಿಯೊಂದನ್ನು ಸಿದ್ಧಪಡಿಸಿದೆ.

1. ಕನಿಷ್ಠ ವೇತನ ಶಾಸನದ ವ್ಯಾಪ್ತಿಗೊಳಪಡುವಂತಹ ಎಲ್ಲ ಕೈಗಾ

(ಕಡೇ ಪುಟ ನೋಡಿ)

ಪ್ರಜಾಪ್ರಭುತ್ವದ ಹಕ್ಕುಗಳ ದಮನದ ವಿರುದ್ಧ ಸಂಘಟನೆ

ಪ್ರಜಾತಾಂತ್ರಿಕ ಹಕ್ಕುಗಳ ರಕ್ಷಣಾ ಸಮ್ಮೇಳನ

ರಾಜ್ಯದಲ್ಲಿ ಬೆಳೆದುಬರುತ್ತಿರುವ ದುಡಿಯುವ ಜನರ ಹೋರಾಟಗಳನ್ನು ಸರಕಾರ ವ್ಯವಸ್ಥಿತವಾಗಿ ದಮನ ಮಾಡುತ್ತಿದೆ. ಆಳುವ ಸರಕಾರದ ಬೆಂಬಲಿಗರಾದ ಕೆಲವು ಗೂಂಡಾಗಳು ಕಾರ್ಮಿಕಸಂಘಟನೆಯ ಮೇಲೆ ಹಲ್ಲೆ ಮಾಡುತ್ತಿವೆ. ರಾಜಧಾನಿ ಬೆಂಗಳೂರಿನಲ್ಲಿ ಪೋಲೀಸ್ ಸೆ. ಕಾಯ್ದೆ 35ರ ಪ್ರಕಾರ ನಗರ ಪೋಲೀಸ್ ಕಮೀಷನರರು ಸಭೆ-ಮೆರವಣಿಗೆ-ಮತಪ್ರದರ್ಶನಗಳಿಗೆ ಅವಕಾಶಕೊಡುತ್ತಿಲ್ಲ.

ಇಂತಹ ಗಂಭೀರ ಸಮಯದಲ್ಲಿ ಮೂಲಭೂತ ಹಕ್ಕುಗಳ ರಕ್ಷಣೆಯನ್ನು ಮಾಡಿಕೊಳ್ಳಬೇಕಾದ ಅಗತ್ಯತೆ ಉಂಟಾಗಿದೆ. ಈ ದಿಸೆಯಲ್ಲಿ ಪ್ರಯತ್ನಗಳು ನಡೆದು ಏ. 12ರಂದು ಬೆಂಗಳೂರಿನ ಪರಾಗ್ ಹೋಟೆಲ್‌ನಲ್ಲಿ ಸಮ್ಮೇಳನ ಜರುಗಿತು.

ಸಿ.ಐ.ಟಿ.ಯು.ವಿನ ಕಾಂ. ವಿ.ಜೆ.ಕೆ ನಾಯರ್, ಎ.ಐ.ಟಿ.ಯು.ಸಿ.ಯ ಕಾಂ. ಬಾಬೂಮ್ಯಾಥ್ಯೂ, ಎಚ್.ಎಂ.ಎಸ್.ನ ಕಾಂ. ಪುಟ್ಟಯ್ಯ ಮತ್ತು ಕಾಂಗ್ರೆಸ್ (ಯು)ನ ಶ್ರೀ ಶಾಸ್ತ್ರೀಮಂತ ಅವರುಗಳು ಈ ಸಮ್ಮೇಳನದ ಅಧ್ಯಕ್ಷ ಮಂಡಳಿಯಲ್ಲಿದ್ದರು. ಕನ್ನಡಪ್ರಭ ದೈನಿಕದ ಸಂಪಾದಕ ಖ್ಯಾತ ಪತ್ರಕರ್ತ ಶ್ರೀ ಖಾದ್ರಿ ಶಾಮಣ್ಣನವರು ಸಮ್ಮೇಳನವನ್ನು ಉದ್ಘಾಟಿಸಿದ್ದರು. ಈ ಸಮ್ಮೇಳನವನ್ನು ಉದ್ದೇಶಿಸಿ ಕಾಂಗ್ರೆಸ್ಸಿನ ಶ್ರೀ ಹಂಚ್ಚಮಾಸ್ತಿಗೌಡ, ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಸಂಪಾದಕ ಶ್ರೀ ಹರಿಕುಮಾರ್, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿಕಾಂ. ಎಂ. ಕೆ. ಭಟ್, ಸಿ.ಪಿ.ಐ. ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಾಂ. ಎಂ. ಸಿ. ವೆಂಕಟರಾಮ್, ಕಾರ್ಮಿಕನಾಯಕರಾದ ಕಾಂ. ಸೂರ್ಯನಾರಾಯಣರಾವ್, ಎಂ. ಸಿ. ನರಸಿಂಹನ್, ಡಿ. ರಾಜಗೋಪಾಲ್ ಮೊದಲಾದವರು ಮಾತನಾಡುತ್ತಾ ಸಮ್ಮೇಳನದ ಉದ್ದೇಶವನ್ನು ತಿಳಿಸಿದರು. ನಿಪ್ಪಾಣಿ ಗೋಲೀಬಾರ್ ನಂತರ ಪರಿಸ್ಥಿತಿ ಅವಲೋಕಿಸಲು ತೆರಳಿದ್ದ ಶ್ರೀ ಹಂಚ್ಚಮಾಸ್ತಿಗೌಡರು ಸಭೆಗೆ ಗೋಲೀಬಾರ್ ಪ್ರಕರಣದ ವಿವರವಾದ ವರದಿಯನ್ನಿತ್ತರು.

ವಿವಿಧ ರಾಜಕೀಯ ಪಕ್ಷಗಳ ಕಾರ್ಯಕರ್ತರು, ಕಾರ್ಮಿಕರು, ಬುದ್ಧಿಜೀವಿಗಳು ಬಹುಸಂಖ್ಯೆಯಲ್ಲಿ ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ರಾಜ್ಯಮಟ್ಟದ ಸಮಿತಿಯೊಂದನ್ನು ರೂಪಿಸಲಾಯಿತು. ಈ ದಿಸೆಯಲ್ಲಿ ಇದೊಂದು ದಿಟ್ಟ ಹೆಜ್ಜೆ. ಹಕ್ಕುಗಳನ್ನು ಕಿತ್ತುಕೊಳ್ಳುವಲ್ಲಿ ಗೂಂಡಾ ಶಕ್ತಿಗಳಿಂದ ಸ್ವಯಂ ರಕ್ಷಣೆಗಾಗಿ ಏರ್ಪಾಡುಗಳನ್ನು ಮಾಡಿಕೊಳ್ಳಬೇಕೆಂದು ಸರ್ವಾನುಮತದಿಂದ ತೀರ್ಮಾನವಾಯಿತು. ಜಿಲ್ಲಾ ಮಟ್ಟದಲ್ಲಿ, ಸ್ಥಳೀಯ ಮಟ್ಟದಲ್ಲಿ ಇದೇ ತರಹದ ಸಮಾವೇಶಗಳನ್ನು ನಡೆಸಬೇಕೆಂದು ಅಭಿಪ್ರಾಯ ಪಡಲಾಯಿತು. ಎಲ್ಲೈಸಿ ನೌಕರರ ಹೋರಾಟ ಈಗ (ನಿಲುಗಡೆಯಾಗಿದೆ). ಪ.ಬಂಗಾಲದ ಎಡರಂಗ ಮತ್ತು ಕೇರಳದ ಎಡ ಮತ್ತು ಪ್ರಜಾಪ್ರಭುತ್ವ ಸರಕಾರಗಳನ್ನು ಬೆಂಬಲಿಸುವ, ಏ. 20ರಂದು ಜಿಲ್ಲಾ ಕೇಂದ್ರಗಳಲ್ಲಿ ನಡೆಯಲಿರುವ ಧರಣಿ, ಸತ್ಯಾಗ್ರಹ ಕಾರ್ಯಕ್ರಮಕ್ಕೆ ಬೆಂಬಲ ನೀಡುವ ನಿರ್ಣಯಗಳ ಅಂಗೀಕಾರವಾದವು. ಪ. ಬಂಗಾಲ ಮತ್ತು ಕೇರಳ ಸರಕಾರಗಳನ್ನು ಬೆಂಬಲಿಸುವ ನಿರ್ಣಯವನ್ನು ಕಾಂಗ್ರೆಸ್(ಯು)ನ ಶ್ರೀ ವಿಜಯದೇವರಾಜ್ ಅರಸರು ಮಂಡಿಸಿದ್ದರು. ನಿರ್ಣಯಗಳೆಲ್ಲವೂ ಅಂಗೀಕಾರವಾದವು.

ಬೆಂಗಳೂರಿನಲ್ಲಿ, ರಾಜ್ಯದಲ್ಲಿ ಹೆಚ್ಚುತ್ತಿರುವ ಜನ ವಿರೋಧಿ ಚಟುವಟಿಕೆಗಳ ವಿರುದ್ಧ ಹಕ್ಕುಗಳ ರಕ್ಷಣೆಗಾಗಿ ಸಿದ್ಧರಾಗುವಲ್ಲಿ ಸಹಕರಿಸುವ ಈ ಸಮ್ಮೇಳನ ನಿಜಕ್ಕೂ ಪ್ರಶಂಸೆಗೆ ಅರ್ಹವಾದುದು.

ಈ ಸಮ್ಮೇಳನದ ಅಂಗವಾಗಿ ಘೋಷಣಾ ಪತ್ರವೊಂದನ್ನು ಸಿದ್ಧಪಡಿಸಲಾಗಿತ್ತು. ಘೋಷಣಾ ಪತ್ರದ ಸಾರಾಂಶ ಈ ರೀತಿ ಇದೆ.

"ಭಾರತದ ಪ್ರತಿಯೊಂದು ದುಡಿಯುವ ವಿಭಾಗವೂ ಹೋರಾಟದ ಹಾದಿ ಹಿಡಿದಿದೆ. ಕಾರ್ಮಿಕರು ಮಾತ್ರವಲ್ಲ, ವಕೀಲರು, ವೈದ್ಯರು, ಉಪಾಧ್ಯಾಯರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ಮೊದಲಾದವರೂ ದಂಗೆ ಏಳುತ್ತಿದ್ದಾರೆ. ರೈತರೂ ಹೋರಾಟದ ಕಣಕ್ಕಿಳಿದಿದ್ದಾರೆ.

ಈ ಹೋರಾಟದ ಪ್ರವೃತ್ತಿಗಳು ಆಳುವ ವರ್ಗವನ್ನು ಕಂಗೆಡಿಸಿವೆ. ಭಾರತವು ಎಚ್ಚೆತ್ತಿರುವುದನ್ನೂ, ಕಾರ್ಮಿಕವರ್ಗವು ಐಕ್ಯತೆಯಿಂದಿರುವುದನ್ನೂ ಅವರು ಕಂಡಿದ್ದಾರೆ. ಭಾರತದ

(ಕಡೇ ಪುಟ ನೋಡಿ)

ಎಲ್ಲೈಸಿ ನೌಕರರ ಮುಷ್ಕರ

—ಪಿ. ವಿಶ್ವನಾಥ ರೈ

ಜೀವವಿಮಾ ನೌಕರರು ಇತರ ನೌಕರರಿಗಿಂತ ಹೆಚ್ಚು ಸಂಬಳ ಪಡೆಯುತ್ತಿದ್ದಾರೆಂಬ ನೆಪವೊಡ್ಡಿ, ಅವರ ವೇತನ ಮತ್ತು ಇತರ ಸೌಲಭ್ಯಗಳನ್ನು ಏಕಪಕ್ಷೀಯವಾಗಿ ಬದಲಾಯಿಸುವ ಅಧಿಕಾರವನ್ನು ಸರಕಾರವು ಜನವರಿ 31, 1981ರ ವಿಶೇಷಾಜ್ಞೆಯ ಮೂಲಕ ತನ್ನ ಕೈಗೆ ತೆಗೆದುಕೊಂಡಿತು. ನಂತರದ ದಿನಗಳಲ್ಲಿ ವಿರೋಧ ಪಕ್ಷಗಳ ಒಕ್ಕೊರಲಿನ ಪ್ರತಿಭಟನೆಯಿದ್ದು, ಕರಡು ಮಸೂದೆಗೆ ಸಂಸತ್ತಿನ ಉಭಯ ಸದನಗಳ ಒಪ್ಪಿಗೆ ಸಿಕ್ಕಿ, ರಾಷ್ಟ್ರಪತಿಯವರ ಸಹಿಪಡೆದು ಅದು ಈಗ ಮಸೂದೆಯಾಗಿ ಪರಿಣಮಿಸಿದೆ.

ಸಂಸತ್ತಿನಲ್ಲಿ ಕರಡು ಮಸೂದೆ ಮಂಡಿಸುವ ಸಂದರ್ಭದಲ್ಲಿ ಮತ್ತು ಅದಕ್ಕಿಂತಲೂ ಹಿಂದೆ, ಅಂದರೆ ಸರ್ವೋನ್ನತ ನ್ಯಾಯಾಲಯವು ನವೆಂಬರ್ 10, 1980ರಂದು ನೌಕರರ ಪರ ತೀರ್ಪು ನೀಡಿದಾಗಿನಿಂದಲೂ, ಜೀವವಿಮಾ ನೌಕರರು ಈಗ ಅನುಭವಿಸುತ್ತಿರುವ ವೇತನ ಮುಂತಾದ ಸೌಲಭ್ಯಗಳು ಸಾರ್ವಜನಿಕ ರಂಗದ ಯಾವುದೇ ಕೈಗಾರಿಕೆಯ ಅಥವಾ ಕೇಂದ್ರ ಸರಕಾರದ ಯಾವುದೇ ಇಲಾಖೆಯಲ್ಲಿನ ನೌಕರರು ಪಡೆಯುವುದಕ್ಕಿಂತ ಅಧಿಕವೆಂಬ ಅಪಪ್ರಚಾರ ಸರಕಾರದ ವತಿಯಿಂದ ನಡೆದೇ ಇತ್ತು. ಇದಕ್ಕಾಗಿ ಪದೇಪದೇ ಕೊಡಲಾಗುತ್ತಿದ್ದ ಉದಾಹರಣೆಯೆಂದರೆ, ಮೂರನೇ ದರ್ಜೆಯ ಒಬ್ಬ ಜೀವವಿಮಾ ನೌಕರನ ತಿಂಗಳ ಸಂಬಳ ರೂ. 3142/– ಮತ್ತು ಕೇಂದ್ರಸರಕಾರದ ಜಂಟಿಕಾರ್ಯದರ್ಶಿ ತನ್ನ ವೇತನ ಶ್ರೇಣಿಯ ಕೊನೆಯ ಹಂತದಲ್ಲಿ ಪಡೆಯುವ ಸಂಬಳ ಬರೇ ರೂ. 3412/- ಎಂಬುದು. ಈ ರೂ. 3412/-ರಲ್ಲಿ ಮೂಲವೇತನ ರೂ. 920/-, ತುಟ್ಟಿ ಭತ್ಯೆ ರೂ. 2042/- ಅಲ್ಲದೆ ಈಗ ಜೀವವಿಮಾ ನೌಕರನಿಗೆ ಸಿಗದೇ ಇರುವ ಬೋನಸಿನ ಅಂಶವಾದ ರೂ. 450/- ಕೂಡಾ ಸೇರಿಸಲ್ಪಟ್ಟಿದೆ.

ಸಂಸತ್ತಿಗೆ ನೀಡಲಾದ ಈ ಅಂಕೆ ಸಂಖ್ಯೆಗಳ ಜವಾಬ್ದಾರಿಯನ್ನು ಸರಕಾರ ತಾನೇ ಹೊರುವ ಬದಲು ಪತ್ರಕರ್ತರ ಮೇಲೆ ಹೇರಿದೆಯೆಂಬುದು ಗಮನಾರ್ಹ. ಆದರೆ ಪತ್ರಿಕೆಗಳಲ್ಲಿ ವಿವರಗಳು ಪ್ರಕಟವಾದಾಗ ಜೀವವಿಮಾ ನಿಗಮದ ಎಲ್ಲಾ ನೌಕರ ಸಂಘಟನೆಗಳಿಗೂ ಆಘಾತವಾಯಿತು. ಸರಕಾರದ ಹೇಳಿಕೆಯ ಮೂಲವನ್ನು ಶೋಧಿಸಿ, ಸತ್ಯವನ್ನು ಹೊರಗೆಡಹಲು ಅವುಗಳಿಗೆ ಸ್ವಲ್ಪ ಕಾಲಬೇಕಾಯಿತು. ಜೀವವಿಮಾ ನಿಗಮದಲ್ಲಿ ಇಷ್ಟು ವೇತನ ಪಡೆಯುವ ನೌಕರನೊಬ್ಬ ಇರಬಹುದಾದರೆ ಅದು ಮೂರನೆ ದರ್ಜೆಯ ಅತ್ಯುನ್ನತ ಶ್ರೇಣಿಯಾದ ಸುಪರಿಂಟೆಂಡೆಂಟ್ ಹುದ್ದೆಯಲ್ಲಿರಬಹುದೆಂಬ ಸತ್ಯ ಬಯಲಾಯಿತು. ಅದನ್ನು ಮತ್ತೂ ಪರೀಕ್ಷಿಸಿದಾಗ, ದೇಶಾದ್ಯಂತವಿರುವ 600 ಮಂದಿ ಸುಪರಿಂಟೆಂಡೆಂಟರ ಪೈಕಿ ನಾಲ್ಕು ಮಂದಿ 32 ವರ್ಷಗಳ ದೀರ್ಘ ಸೇವೆಯ ಬಳಿಕ ತಿಂಗಳಿಗೆ ರೂ.3412/- (ಕೊಡದಿರುವ ಬೋನಸ್ಸು ಸೇರಿ) ಸಂಬಳಪಡೆಯುತ್ತಿದ್ದಾರೆ ಮತ್ತು ಅವರ ಪೈಕಿ ಇಬ್ಬರು ಈಗಾಗಲೇ ನಿವೃತ್ತರಾಗಿದ್ದಾರೆಂಬ ವಿಚಾರ ತಿಳಿಯಿತು.

ಜೀವವಿಮಾ ನಿಗಮದ ನೌಕರ ಸಂಘಟನೆಗಳು ತಮ್ಮ ಸಾಂಘಿಕ ಶಕ್ತಿಯ ಮೂಲಕ ಇತರ ರಂಗದ ನೌಕರರಿಗಿಂತ ಹೆಚ್ಚಿನ ವೇತನ ಮತ್ತು ಸೌಲಭ್ಯಗಳನ್ನು ಸೆಳೆದುಕೊಂಡಿದ್ದಾರೆಂಬ ಸರಕಾರದ ಅಪಪ್ರಚಾರವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ವಸ್ತುಸ್ಥಿತಿ ಹಾಗಿಲ್ಲವೆಂದೂ, ಸರಕಾರದ ಪ್ರಚಾರದ ಹಿಂದೆ ಬೇರೆಯೇ ಉದ್ದೇಶ ಅಡಗಿದೆಯೆಂಬುದು ಸ್ಪಷ್ಟವಾಗುತ್ತದೆ. ನಿಗಮದಲ್ಲಿ ಬಹುಸಂಖ್ಯಾತರಾಗಿರುವ ಮೂರನೇ ದರ್ಜೆಯ ನೌಕರರ ವೇತನವನ್ನು ಇಂತಹ ಪರೀಕ್ಷೆಗೆ ಒಳಪಡಿಸಿದಾಗ ಕಂಡುಬರುವ ಅಂಶಗಳು ಇವು.

ಮೂರನೇಯ ದರ್ಜೆಯಲ್ಲಿ ಒಟ್ಟು ಆರು ಶ್ರೇಣಿಗಳಿದ್ದು ಅವುಗಳ ಪೈಕಿ ಮೊದಲನೆಯದ್ದು ರೆಕಾರ್ಡ್ ಕ್ಲರ್ಕ್. ಇದರಿಂದ ಭಡ್ತಿ ಹೊಂದುತ್ತಾ ಅನುಕ್ರಮವಾಗಿ ಅಸಿಸ್ಟೆಂಟ್ (ಬೆರಳಚ್ಚುಗಾರನೂ ಸೇರಿದಂತೆ), ಶೀಘ್ರಲಿಪಿಕಾರ (ಸ್ಟೆನೋ) ಸೆಕ್ಶನ್ ಹೆಡ್, ಹಯರ್ ಗ್ರೇಡ್ ಅಸಿಸ್ಟಂಟ್ ಮತ್ತು ಸುಪರಿಂಟೆಂಡೆಂಟ್ ಆಗಬಹುದು. ಆದರೆ ಒಂದು ಹುದ್ದೆಯಿಂದ ಇನ್ನೊಂದಕ್ಕೆ ಭಡ್ತಿಹೊಂದುವುದು ತುಂಬಾ ಪ್ರಯಾಸಕರವೆಂಬುದು, ತಮ್ಮ ದೀರ್ಘ ಸೇವಾವಧಿಯಲ್ಲಿ ಒಮ್ಮೆಯಾದರೂ ಭಡ್ತಿಹೊಂದದೇ ತಾವು ಸೇರಿದ ಹುದ್ದೆಯಲ್ಲೇ ಕೊಳೆಯುತ್ತಿರುವ ಅಸಂಖ್ಯಾತ ನೌಕರರಿಂದ ತಿಳಿಯುತ್ತದೆ. ಈ ವಿಚಾರವನ್ನು ಸರಕಾರ ಬೇಕೆಂದೇ ಮರೆಮಾಚುತ್ತಿದೆ.

ಜೀವವಿಮಾ ನೌಕರರ ವೇತನ ಮತ್ತು ಇತರ ಸೌಲಭ್ಯಗಳನ್ನು ಪರೀಕ್ಷಿಸಿದಾಗ ಕಣ್ಣುಕುಕ್ಕುವ ಅಂಶವೆಂದರೆ, ಅವರು ತಮ್ಮ ಮೂಲವೇತನಗಳಿಗೆ ಹೋಲಿಸಿದಾಗ ಪಡೆಯುವ ಅತ್ಯಂತ ಹೆಚ್ಚಿನದೆನ್ನಬಹುದಾದ ತುಟ್ಟಿಭತ್ಯೆಯ ಪ್ರಮಾಣ. ಹೊಸದಾಗಿ ಸೇರಿದ ರೆಕಾರ್ಡ್ ಕ್ಲಾರ್ಕ್‌ನ ಒಬ್ಬನ ಮೂಲವೇತನ ರೂ. 150/- ಆಗಿದ್ದರೆ ಸರಕಾರವು ಪ್ರಕಟಿಸುವ (1960= 100) ಬೆಲೆಸೂಚ್ಯಂಕದ ಪ್ರಕಾರ ಅವನ ತುಟ್ಟಿಭತ್ಯೆ ರೂ. 333-00. ಅದೇ ರೀತಿ ಅಸಿಸ್ಟಂಟ್ ಹುದ್ದೆಯ ಆರಂಭದ ಮೂಲವೇತನ ರೂ. 175/- ಆಗಿದ್ದರೆ ತುಟ್ಟಿಭತ್ಯೆ 389/- ಆಗಿದೆ. ಆದರೆ ತಮ್ಮ ಸಾಂಘಿಕ ಶಕ್ತಿಯ ಮೂಲಕ ಗಳಿಸಿಕೊಂಡ ತುಟ್ಟಿಭತ್ಯೆಗೆ ನೌಕರರ ಸಂಘಗಳನ್ನು ದೂರುವುದು ಯುಕ್ತವಲ್ಲ. ಯಾಕೆಂದರೆ, ಸರಕಾರೀ ಇಲಾಖೆಗಳಲ್ಲಾಗಲೀ, ಖಾಸಗಿ ಉದ್ಯಮಗಳಲ್ಲಾಗಲೀ ಕೆಲಸಮಾಡುವ ನೌಕರ, ಎಲ್ಲೈಸಿ ನೌಕರನಿಗಿಂತ ಹೆಚ್ಚು ಮೂಲವೇತನ ಪಡೆಯುತ್ತಿದ್ದಾನೆ.

ಕೇಂದ್ರಸರ್ಕಾರದ ವಿತ್ತ ಶಾಖೆಯ ರಾಜ್ಯಸಚಿವ ಶ್ರೀ ಎಸ್. ಎಸ್. ಸಿಸೋದಿಯಾ ಲೋಕಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ಕೇಂದ್ರಸರ್ಕಾರದ ಕಾರ್ಯಾಲಯದ ಸಿಬ್ಬಂದಿ ಪಡೆಯುತ್ತಿರುವ ಮೂಲವೇತನಗಳ ವಿವರ ಇಂತಿದೆ:-

1. ಪಿಯಾನ್ – ಕನಿಷ್ಠ ರೂ. 196/-
2. ಎಲ್. ಡಿ. ಸಿ. – ಕನಿಷ್ಠ ರೂ. 260/-
3. ಸೆಕ್ಷನ್ ಆಫೀಸರ್ – ಕನಿಷ್ಠ ರೂ. 650/–

ಮೇಲಿನದಕ್ಕೆ ಹೋಲಿಸಿದರೆ ಎಲ್ಲೈಸಿ ನೌಕರನ ಮೂಲವೇತನ ತೀರಾ ಕಡಿಮೆ. ಆದ್ದರಿಂದಲೇ ಹೆಚ್ಚು ತುಟ್ಟಿಭತ್ಯೆಗಾಗಿ, ಬೋನಸಿಗಾಗಿ, ಹೋರಾಡಿ ಎಲ್ಲೈಸಿ ನೌಕರಸಂಘಗಳು ಸ್ವಲ್ಪಮಟ್ಟಿಗೆ ಯಶಸ್ವಿಯಾಗಿವೆ. ಜೀವವಿಮಾ ನಿಗಮದ ಮೂರನೇ ದರ್ಜೆಯ ನೌಕರರು ಮತ್ತು ಮೊದಲನೆಯ ದರ್ಜೆಯ ಅಧಿಕಾರಿಗಳಿಗಿರುವ ದಾಮಾಶಯವೂ ಅತ್ಯಂತ ತೊಡಕಿನದಾಗಿದೆ. ಮೂರನೇ ದರ್ಜೆ ನೌಕರನ ಸಂಬಳ ಮೇಲ್ನೋಟಕ್ಕೆ ಆಕರ್ಷಕವೆಂದು ಕಂಡುಬಂದರೂ ಅವನು ಅದೇ ವರ್ಗದಲ್ಲಿ ಭಡ್ತಿ ಹೊಂದುವ ಅವಕಾಶ ಕಡಿಮೆಯಿದ್ದು, ಮೊದಲನೆ ದರ್ಜೆಯ ಅಧಿಕಾರಿಯಾಗುವ ಮಾತಂತೂ ಇಲ್ಲವೇ ಇಲ್ಲವೆನ್ನಬಹುದು. ಭಡ್ತಿ ಆಗದಿರಲು ಅಥವಾ ನಿಧಾನವಾಗಲು ಮುಖ್ಯಕಾರಣವೆಂದರೆ, ಭಡ್ತಿಯ ಅವಕಾಶಗಳು ಅತೀ ಕಡಿಮೆಯಾಗಿದ್ದು ಅದಕ್ಕೆ ಪೈಪೋಟಿ ತುಂಬಾ ಇರುವುದಲ್ಲದೆ, ಮೂರನೇ ದರ್ಜೆಯ ಹುದ್ದೆಗಳಿಗೆ ಹೋಲಿಸಿದರೆ ಅತಿ ಕಡಿಮೆ ಸಂಖ್ಯೆಯಲ್ಲಿರುವ ಮೊದಲನೆ ದರ್ಜೆಯ ಹುದ್ದೆಗಳು. 1979ರಲ್ಲಿ ಪ್ರಕಟಿಸಲ್ಪಟ್ಟ ಅಂಕೆ ಸಂಖ್ಯೆಗಳಂತೆ ಜೀವವಿಮಾ ನಿಗಮದ ಒಟ್ಟು 34,492 ಮೂರನೇ ದರ್ಜೆಯ ನೌಕರರಿಗೆ ಇದ್ದ ಮೊದಲನೆಯ ದರ್ಜೆಯ ಅಧಿಕಾರಿಗಳು ಕೇವಲ 4,157. ಅದೇ ವೇಳೆ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ 15,592 ನೌಕರರಿಗೆ ಪ್ರತಿಯಾಗಿ 7,654 ಅಧಿಕಾರಿಗಳಿದ್ದರು.

ನೌಕರರ ಸಂಬಳವನ್ನು ಕಡಿತಗೊಳಿಸುವ ಮೂಲಕ ಎಲ್ಲೈಸಿಯ ಆಡಳಿತ ವೆಚ್ಚವನ್ನು ಕಡಿಮೆ ಮಾಡಿ ಪಾಲಿಸಿದಾರರ ಹಿತರಕ್ಷಣೆ ಮಾಡಬಹುದೆಂಬುದು ಸರಕಾರದ ಇನ್ನೊಂದು ಅಸ್ತ್ರ. ಆದರೆ ನೌಕರರ ಸಂಬಳಕ್ಕಾಗಿ ಖರ್ಚು ಮಾಡುತ್ತಿರುವ ಹಣ ಒಟ್ಟು ಖರ್ಚಿಗೆ ಹೋಲಿಸಿದರೆ ತೀರಾ ಅಲ್ಪವಾಗಿದ್ದು, ಅದರಿಂದ ಪಾಲಿಸಿದಾರರಿಗೆ ತೊಂದರೆಯಾಗಿದೆಯೆಂಬ ವಾದ ಸುಳ್ಳು. ಎಲ್ಲೈಸಿಯು ತನ್ನ ನೌಕರರ ಸಂಬಳ-ಸವಲತ್ತುಗಳಿಗಾಗಿ ಖರ್ಚು ಮಾಡುವ ಹಣ ಅದರ ಒಟ್ಟು ಆದಾಯದ ಶೇಕಡಾ 9.20ರಷ್ಟು ಆಗಿದ್ದು, ಇದು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಲೇ ಬಂದಿದೆ. 45,000 ಮಂದಿ ನೌಕರರಿರುವ ಜೀವವಿಮಾ ನಿಗಮದಂತಹ ಒಂದು ಸರ್ವಜನೋಪಯೋಗಿ ಸಂಸ್ಥೆಗೆ ಈ ವೆಚ್ಚ ಹೆಚ್ಚಲ್ಲ.

ಇನ್ನು ಜೀವವಿಮಾ ನೌಕರರ ಬಗ್ಗೆ ಸಾರ್ವಜನಿಕ ಅಭಿಪ್ರಾಯದ ಬಗ್ಗೆ ಹೇಳುವುದಿದ್ದರೆ, ಮೊದಲೇ ಹೇಳಿದಂತೆ ಅಂತಹ ತಪ್ಪು ಅಭಿಪ್ರಾಯ ಮೂಡಲು ಆಡಳಿತ ವರ್ಗ ಮತ್ತು ಸರಕಾರಗಳು ಮೂಲಕಾರಣ. ಆದರೆ ಪಾಲಿಸಿದಾರರಿಗೆ ನೀಡುತ್ತಿರುವ ಸೇವೆಯಲ್ಲಿನ ಕೆಲವು ನ್ಯೂನತೆಗಳೂ ಇದಕ್ಕೆ ಕಾರಣವಾಗಬಹುದು. ಅಂತಹ ನ್ಯೂನತೆಗಳನ್ನು ತೊಡೆದುಹಾಕಲು ಮತ್ತು ಸಾರ್ವಜನಿಕರಲ್ಲಿ ಸದಭಿಪ್ರಾಯ ಮೂಡಿಸಲು ನೌಕರ ಸಂಘಗಳು ಸಾಕಷ್ಟು ಪ್ರಯತ್ನಿಸಿವೆ. ಕಾಲದಿಂದ ಕಾಲಕ್ಕೆ ಸರಕಾರದಿಂದ ನೇಮಿಸಲ್ಪಟ್ಟ ಅನೇಕ ಸಮಿತಿಗಳಿಗೆ ಪಾಲಿಸಿದಾರರಿಗೆ ಉತ್ತಮ ಸೇವೆ ನೀಡುವ ಬಗ್ಗೆ ನೌಕರ ಸಂಘಗಳು ಅನೇಕ ಸಲಹೆ ನೀಡಿವೆಯಾದರೂ, ಅಂತಹ ಸಲಹೆಗಳು ಆಡಳಿತ ವರ್ಗಕ್ಕಾಗಲೀ, ಸರಕಾರಕ್ಕಾಗಲೀ ಮಾನ್ಯವಾಗಿಲ್ಲ. ಪ್ರತಿಯಾಗಿ ನೌಕರರ ವಿರುದ್ಧ ಪ್ರಚಾರಕ್ಕಾಗಿ ಸಾರ್ವಜನಿಕ ಸುದ್ದಿ ಮಾಧ್ಯಮಗಳನ್ನು ಅತಿಯಾಗಿ ಬಳಸಲಾಗುತ್ತಿದೆ. ಇಂದು ಜೀವವಿಮಾ ನೌಕರರು ಇದೆಲ್ಲದರ ವಿರುದ್ಧ ಯುದ್ಧ ಸಾರಿದ್ದಾರೆ.

○

ಮತಪ್ರದರ್ಶನಕ್ಕೂ ಅವಕಾಶವಿಲ್ಲ

ಏಪ್ರಿಲ್ 2, 1981ರಿಂದ ಎಲ್ಲೈಸಿ ನೌಕರರ ಅನಿರ್ಧಿಷ್ಟ ಅವಧಿಯ ಮುಷ್ಕರ ಪ್ರಾರಂಭವಾಗಿದೆ. ಬೆಂಗಳೂರಿ
ನಲ್ಲಿ ಎಲ್ಲೈಸಿ ನೌಕರರಿಗೆ ಪೋಲೀಸ್ ಕಾಯ್ದೆ ಸೆ. 35ರ ಪ್ರಕಾರ ಮತಪ್ರದರ್ಶನಕ್ಕೂ ಅವಕಾಶ ಕೊಡುತ್ತಿಲ್ಲ.
ಕಾರಣ ಪಕ್ಕದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಎರಡುದಿನ ಮೀಟಿಂಗ್ ನಡೆಸಿದರು. ಮೂರನೇಯ ದಿನ
ಅದಕ್ಕೂ ಅವಕಾಶವಿಲ್ಲ.

ಸಭೆ, ಮೆರವಣಿಗೆ ಮೊದಲಾದವುಗಳು ಸಂವಿಧಾನದತ್ತ ಹಕ್ಕು. ಬೆಂಗಳೂರಿನ ಪೋಲೀಸ್ ಕಮೀಷನರರು ಈ ಹಕ್ಕುಗಳನ್ನು ತುಳಿಯುತ್ತಿದ್ದಾರೆ.

ಪ್ರಗತಿಪರ ಮಹಿಳಾ ಫೆಡರೇಷನ್ ಉದ್ಘಾಟನೆ

ಕುಂದಾಪುರ ತಾಲ್ಲೂಕು ಕೋಣಿ ಗ್ರಾಮದಲ್ಲಿ "ಪ್ರಗತಿಪರ ಮಹಿಳಾ ಫೆಡರೇಷನ್"ನ ಶಾಖೆಯನ್ನು ತಾರೀಕು 5-4-8 ರಂದು ಶ್ರೀಮತಿ ಕೋಡಿ, ಮಹಿಳಾ ಫೆಡರೇಷನ್‌ನ ತಾಲ್ಲೂಕು ಸಮಿತಿ ಕೋಶಾಧಿಕಾರಿ ಇವರು ಉದ್ಘಾಟಿಸಿದರು.

ಶ್ರೀಮತಿ ಕೋಡಿಯವರು ಉದ್ಘಾಟನಾ ಭಾಷಣ ಮಾಡುತ್ತಾ, "ಮುಖ್ಯವಾಗಿ ಗ್ರಾಮಾಂತರ ಪ್ರದೇಶದ ದುಡಿಯುವ ಮಹಿಳೆಯರು ಸಂಘಟಿತರಾಗಿ ತಮ್ಮ ಮೇಲೆ ನಡೆಯುವ ಶೋಷಣೆ, ಅತ್ಯಾಚಾರ ಮತ್ತು ದಬ್ಬಾಳಿಕೆಯ ವಿರುದ್ಧ ಹೋರಾಟ ಮಾಡಬೇಕು" ಎಂದು ಕರೆಯಿತ್ತರು.

ಕೋಣಿ ಶಾಖೆಯ ಕಾರ್ಯಕಾರೀ ಸಮಿತಿಗೆ ಈ ಕೆಳಗಿನವರನ್ನು ಆಯ್ಕೆ ಮಾಡಲಾಯಿತು.

ಕುಮಾರಿ ಕೆ. ಶಾರದ (ಕಾರ್ಯದರ್ಶಿ), ಕೆ. ಸುಶೀಲ, ಐರೀನ್ ಡಿಸೋಜ, ಕೆ. ಸುಜಾತ, ಕೆ. ಎನ್. ಶಾಂತ, ಕೆ. ಜಿ. ಸುಶೀಲ. ಪ್ರಾರಂಭದಲ್ಲಿ ಕೆ. ಶಾರದ ಇವರು ಸಭಿಕರನ್ನು ಸ್ವಾಗತಿಸಿದರು. ಕೆ. ಸುಶೀಲ ಇವರು ವಂದಿಸಿದರು. 'ಸಮುದಾಯ ಕುಂದಾಪುರ' ಇವರ ಬೀದಿ ನಾಟಕ ಪ್ರದರ್ಶನದೊಂದಿಗೆ ಸಭೆ ಮುಕ್ತಾಯವಾಯಿತು.

ರಾಜ್ಯದ ಬೀಡಿ ಕಾರ್ಮಿಕರ ಹೋರಾಟ

ದಿವಸಕ್ಕೆ 8 ರೂ. ಸಂಬಳ, ಎಲೆ ಅವರೇಜಿನಲ್ಲಿ ಮೋಸದ ನಿಲುಗಡೆ, ಪಿ. ಎಫ್. ದಾಖಲಾತಿ ಮುಂತಾದ ಬೇಡಿಕೆಗಳಿಗಾಗಿ ಜಿಲ್ಲಾ ಕಛೇರಿ, ತಾಲ್ಲೂಕು ಕಛೇರಿ ಮತ್ತು ಕಾರ್ಮಿಕ ಇಲಾಖೆಯ ಕಛೇರಿಗಳನ್ನು 1-2-1979ರಿಂದ ಪಿಕೆಟಿಂಗ್ ಮಾಡಬೇಕೆಂದು ತೀರ್ಮಾನವಾಗಿ ರಾಜ್ಯಾದ್ಯಂತ ಸಿದ್ಧತೆಗಳಾಗುತ್ತಿದ್ದವು. ಆದರೆ ಅಂದಿನ ಕಾರ್ಮಿಕಮಂತ್ರಿಯವರ ಆಶ್ವಾಸನೆಯಿಂದ ಹೋರಾಟವನ್ನು ಎರಡು ತಿಂಗಳು ಮುಂದೂಡಲಾಯಿತು. ಕನಿಷ್ಠ ವೇತನ ಸಲಹಾ ಸಮಿತಿಯಲ್ಲಿದ್ದ ಕಾರ್ಮಿಕ ಪ್ರತಿನಿಧಿಗಳ ಅಸಡ್ಡೆಯಿಂದಾಗಿ ಕೇವಲ 55 ಪೈಸೆ ವೇತನ ಹೆಚ್ಚಾಯಿತು. ಇದನ್ನು ಜಾರಿಮಾಡಲು ಸಹ ಬೀಡಿಮಾಲೀಕರು ವಿಳಂಬಮಾಡುತ್ತಿದ್ದುದರಿಂದ ಬೀಡಿಕಾರ್ಮಿಕರ ಫೆಡರೇಷನ್ 1979ನೇ ಮೇ ತಿಂಗಳು ಮೈಸೂರಿನಲ್ಲಿ ಸಭೆ ನಡೆದು ಹೆಚ್ಚಾದ ಕನಿಷ್ಠ ಕೂಲಿಯನ್ನು ಏಪ್ರಿಲ್‌ನಿಂದಲೇ ಕೊಡಬೇಕೆಂದು ಒತ್ತಾಯಪಡಿಸಲು ರಾಜ್ಯಾದ್ಯಂತ ಚಳುವಳಿ ನಡೆಸಬೇಕೆಂದು ಕರೆಕೊಡಲಾಯಿತು. ಈ ಕರೆಯ ಮೇರೆಗೆ ಹರಿಹರ, ಸಿರಾ, ಕುಣಿಗಲ್, ತುಮಕೂರು, ಬೆಂಗಳೂರು ಮೈಸೂರುಗಳಲ್ಲಿ ಚಳುವಳಿ ನಡೆಯಿತು ಮಂಗಳೂರಿನಲ್ಲಿ ಅಸಿಸ್ಟಂಟ್ ಲೇಬರ್ ಕಮಿಷನರ್ ಕಛೇರಿಯನ್ನು ಗಂಟೆಗಟ್ಟಲೇ ಘರಾವೋ ಮಾಡಲಾಯಿತು. ಪ್ರತಿಭಟನೆಯ ಪರಿಣಾಮವಾಗಿ ತುಮಕೂರು ಮತ್ತು ಕುಣಿಗಲ್‌ನಲ್ಲಿ ಬೀಗಮುದ್ರೆಯನ್ನು ಘೋಷಿಸಿ ಕಾರ್ಖಾನೆಗಳನ್ನು ಮುಚ್ಚಲಾಯಿತು.

ಅಖಿಲಭಾರತ ಬೀಡಿ ಕಾರ್ಮಿಕರ ಸಮನ್ವಯ ಸಮಿತಿಯು 1980 ಆಗಸ್ಟ್ 30-31ರಲ್ಲಿ ಬೆಂಗಳೂರಿನಲ್ಲಿ ಸೇರಿತ್ತು. ಈ ಸಭೆಯಲ್ಲಿ ಅಕ್ಟೋಬರ್ 17ರಂದು ಬೇಡಿಕೆ ದಿನವನ್ನು ಆಚರಿಸಲು ಕರೆಕೊಡಲಾಯಿತು. ದ. ಕನ್ನಡಜಿಲ್ಲೆ, ತುಮಕೂರು, ಬೆಂಗಳೂರು, ಕೋಲಾರ, ಹರಿಹರ, ಮೈಸೂರುಗಳಲ್ಲಿ ಮನವಿಗೆ ಸಹಿಸಂಗ್ರಹದ ಪ್ರದರ್ಶನ ಇತ್ಯಾದಿ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆ.

1980ರ ಜೂನ್‌ನಲ್ಲಿ ಸಾವಿರ ಬೀಡಿಗೆ 9 ರೂ. ವೇತನ ಮೊದಲಾದ ವೇತನಗಳ ಪಟ್ಟಿಯನ್ನು ಆಡಳಿತ ಮಂಡಳಿಗಳ ಮತ್ತು ಸರ್ಕಾರದ ಮುಂದೆ ಇಡಲಾಯಿತು. ಮತ್ತು ಲೇಬಲ್ ಬೀಡಿಯ ಮೇಲೆ ಹಾಕಿದ ಸುಂಕವನ್ನು ರದ್ದುಮಾಡಿ ಮೊದಲಿನಂತೆ ತಂಬಾಕಿನ ಮೇಲೆಯೇ ಸುಂಕವನ್ನು ಹಾಕಬೇಕೆಂದು ಒತ್ತಾಯಿಸಿ ಕೇಂದ್ರಸರ್ಕಾರದ ಅರ್ಥಸಚಿವರಿಗೆ ಕಾರ್ಮಿಕರಿಂದ ಸಹಿ ಸಂಗ್ರಹಿಸಿದ 1 ಲಕ್ಷ ರುಜುಮಾಡಿದ ಇನ್‌ಲ್ಯಾಂಡ್ ಲೆಟರ್‌ಗಳನ್ನು ಕಳುಹಿಸಲಾಗಿದೆ.

20-9-80ರಂದು ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ. ಮತ್ತು ಅಜೀಜ್ ಸೇಠ್ ನಾಯಕತ್ವದ ಬೀಡಿಕಾರ್ಮಿಕ ಸಂಘಗಳ ಪ್ರತಿನಿಧಿಗಳು ಮೈಸೂರಿನಲ್ಲಿ ಸಭೆಸೇರಿ ಬೀಡಿಕಾರ್ಮಿಕರ ಸಮಸ್ಯೆಗಳನ್ನು ಚರ್ಚಿಸಿ ಸಂಯುಕ್ತ ಕಾರ್ಯಾಚರಣೆಯ ಅಂದಾಜು ಮಾಡಲಾಯಿತು. 20-9-80ರಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಸಿ.ಐ.ಟಿ.ಯು. ನೇತೃತ್ವದ 9 ಬೀಡಿಕಾರ್ಮಿಕ ಸಂಘಗಳು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಪ್ರದರ್ಶನ ನಡೆಸಿ, ಜಿಲ್ಲಾಧಿಕಾರಿಯವರಿಗೆ ಮತ್ತು ಬೀಡಿಮಾಲೀಕರ ಸಂಘದ ಅಧ್ಯಕ್ಷರಿಗೆ ಬೇಡಿಕೆಗಳ ಮನವಿಯನ್ನು ಕೊಡಲು ಹೋದಾಗ ಈ ಪ್ರದರ್ಶನದಲ್ಲಿ ಸಹಸ್ರಾರು ಬೀಡಿ ಕಾರ್ಮಿಕರು ಮತ್ತು ಮಹಿಳೆಯರು ಭಾಗವಹಿಸಿದ್ದರು. ಅದೇ ದಿವಸ ಉಡುಪಿ, ಕುಂದಾಪುರಗಳಲ್ಲಿ ಬೀಡಿ ಕಾರ್ಮಿಕರ ಪ್ರದರ್ಶನಗಳು ನಡೆದಿವೆ. ಈ ಚಳುವಳಿಯ ಸಿದ್ಧತೆಗಾಗಿ 22-9-1980 ರಂದು ಮಂಗಳೂರು, ಬಂಟ್ವಾಳ, ಉಡುಪಿ ಮತ್ತು ಕುಂದಾಪುರ ತಾಲ್ಲೂಕುಗಳಲ್ಲಿ ಬೀಡಿ ಕಂಟ್ರಾಕ್ಟರುಗಳ ಮುಂದೆ ಪ್ರದರ್ಶನಗಳನ್ನು ನಡೆಸಿ ಮನವಿಗಳನ್ನು ಕೊಡಲಾಯಿತು. ಈ ಚಳುವಳಿಯನ್ನು ಮುಂದುವರಿಸಲು ತೀರ್ಮಾನಿಸಿ 1980 ಅಕ್ಟೋಬರ್ 28 ರಿಂದ 31ರವರೆಗೆ ಮಂಗಳೂರಿನ ಅಸಿಸ್ಟಂಟ್ ಲೇಬರ್ ಕಮೀಷನರ್ ಕಛೇರಿಯ ಮುಂದೆ ಬೀಡಿ ಕಾರ್ಮಿಕರು ಸಾಮೂಹಿಕ ಸತ್ಯಾಗ್ರಹ ನಡೆಸಿದರು.

9-12-1980ರಂದು ಬೆಂಗಳೂರಿನಲ್ಲಿ ಬೀಡಿ ಕಾರ್ಮಿಕರ ಫೆಡರೇಷನ್ ಸಭೆ ಸೇರಿ 9-12-80ರಂದು ಜಂಟಿ ಕ್ರಿಯಾಸಮಿತಿ ಸಭೆ ನಡೆದು ಅನಂತರ ಜಂಟಿ ಪತ್ರಿಕಾ ಸಮ್ಮೇಳನ ನಡೆದು 1000 ಬೀಡಿಗೆ 12 ರೂ. ವೇತನ ಮೊದಲಾದ ಬೇಡಿಕೆಗಳ ಪಟ್ಟಿಯನ್ನು ರೂಪಿಸಿ 17-12-80ರಂದು ಒಂದು ದಿವಸದ ಮುಷ್ಕರವನ್ನು ನಡೆಸಲು ಕರೆಕೊಟ್ಟಿತು. ಈ ಕರೆ ಮೇರೆಗೆ ರಾಜ್ಯದ ಬೀಡಿ ಕಾರ್ಮಿಕರ ಚರಿತ್ರೆಯಲ್ಲೇ ಮೊದಲ ಬಾರಿಗೆ 3 ಲಕ್ಷ ಬೀಡಿ ಕಾರ್ಮಿಕರು ಭಾಗವಹಿಸಿದ ಯಶಸ್ವಿ ಮುಷ್ಕರವು ನಡೆಯಿತು. ಅದೇ ದಿವಸ ತಮಿಳುನಾಡು ಮತ್ತು ಕೇರಳಗಳಲ್ಲಿಯೂ ಮುಷ್ಕರ ನಡೆಯಿತು.

ರಾಜ್ಯ ಸರ್ಕಾರವು ಈ ಬಗ್ಗೆ ಹಲವು ಬಾರಿ ಅಂದರೆ ಹದಿನೆಂಟು-ಇಪ್ಪತ್ತು ಬಾರಿ ತ್ರಿಪಕ್ಷೀಯ ಸಭೆಗಳನ್ನು ಕರೆದಿದ್ದರೂ ಸಹ ಮಾಲೀಕರು ಸಾವಿರ ಬೀಡಿಗೆ ಕೇವಲ 40 ಪೈಸೆಗಳನ್ನು ಮಾತ್ರ ಹೆಚ್ಚು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದ್ದರಿಂದ ಪುನಃ ಕಾರ್ಮಿಕರು ಹೋರಾಟದ ಹಾದಿಯಲ್ಲಿ ಸಾಗುತ್ತಿದ್ದಾರೆ. ಫೆಬ್ರವರಿ 25ರಂದು ತಮಿಳುನಾಡು, ಕೇರಳ ಮತ್ತು ಕರ್ನಾಟಕದ ಬೀಡಿ ಕಾರ್ಮಿಕರ ಫೆಡರೇಷನ್‌ಗಳ ಜಂಟೀ ಸಭೆ ಬೆಂಗಳೂರಿನಲ್ಲಿ ನಡೆದು ಮಾರ್ಚ್ 16ರಂದು ಮುಷ್ಕರದ ನೋಟೀಸನ್ನು ಕೊಟ್ಟು ಮಾರ್ಚ್ ಕೊನೆ ಅಥವಾ ಏಪ್ರಿಲ್ ಪ್ರಾರಂಭದಲ್ಲಿ ಮೂರು ರಾಜ್ಯಗಳಲ್ಲಿಯೂ ಸಂಯುಕ್ತ ಅನಿರ್ದಿಷ್ಟ ಕಾಲದ ಮುಷ್ಕರ ನಡೆಸಲು ತೀರ್ಮಾನಿಸಿರುತ್ತೆ.

ಈ ತೀರ್ಮಾನವನ್ನು ಯಶಸ್ವಿಗೊಳಿಸಲು ತಾ. 15-3-81 ರಂದು ಮೈಸೂರಿನಲ್ಲಿ ರಾಜ್ಯದ ಬೀಡಿ ಕಾರ್ಮಿಕರ ಪ್ರತಿನಿಧಿಗಳಸಭೆಯು ಕಾಂ.ಮೂಸಬ್ಬಾರವರ ಅಧ್ಯಕ್ಷತೆಯಲ್ಲಿ ಸೇರಿ ಹೋರಾಟದ ಕಾರ್ಯಕ್ರಮ ಗೊತ್ತುಪಡಿಸಿ ತಾ. 26-3-81ರಂದು ರಾಜ್ಯಾದ್ಯಂತ

ಮುಹಮ್ಮದ್ ದಸ್ತಗೀರ್

ಕಾರ್ಖಾನೆಗಳ ಎದುರು ಬೇಡಿಕೆಗಳ ಯಶಸ್ವಿಗಾಗಿ ಸತ್ಯಾಗ್ರಹ ಇತ್ಯಾದಿ ಚಳುವಳಿ ನಡೆಸಬೇಕೆಂದು ಕಾರ್ಮಿಕರಿಗೆ ಕರೆಕೊಟ್ಟಿತು. ಈ ಕರೆ ಮೇರೆಗೆ ಕೋಲಾರ, ಮುಳಬಾಗಿಲು, ಬೆಂಗಳೂರು, ಕುಣಿಗಲ್, ಸಿರಾ, ತುಮಕೂರುಗಳಲ್ಲಿ ಕಾರ್ಖಾನೆಗಳ ಎದುರು ಕಾರ್ಮಿಕರ ಸಾಮೂಹಿಕ ಸತ್ಯಾಗ್ರಹ ನಡೆದಿರುತ್ತೆ. ಹರಿಹರದಲ್ಲಿ ಭಾರತ್ ಬೀಡಿ ಫ್ಯಾಕ್ಟರಿಯ ಹನ್ನೆರಡು ಗಂಟೆಗಳ ಕಾಲ ಘೆರಾವೋ ಮತ್ತು ಮಂಗಳೂರಿನಲ್ಲಿ ಪಿ. ವಿ. ಎಸ್. ಮಾಲೀಕರ ಕಛೇರಿಯನ್ನು ಬೆಳಿಗ್ಗೆ ಪ್ರಾರಂಭವಾಗಿ ಮಧ್ಯಾಹ್ನ 3 ಗಂಟೆಯವರೆವಿಗೂ ಘೆರಾವೋ ಮಾಡಲಾಯಿತು. ಪಿ.ವಿ.ಎಸ್. ಮಾಲೀಕರು ರಾಜ್ಯ ಬೀಡಿ ಮಾಲೀಕರ ಸಂಘದ ಅಧ್ಯಕ್ಷರೂ ಸಹ ಆಗಿರುತ್ತಾರೆ. ಮಂಗಳೂರಿನಲ್ಲಿ ನಡೆದ ಘೆರಾವೋಗೆ ಸಿಕ್ಕಿಬಿದ್ದ ಇವರು ಪೋಲೀಸ್ ಅಧಿಕಾರಿಗಳಿದುರು 4-4-81ರಂದು ಮಂಗಳೂರಿನಲ್ಲೇ ಜಂಟೀ ಸಭೆಯನ್ನು ಕರೆದು ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವ ವಾಗ್ದಾನ ಕೊಟ್ಟ ನಂತರ ಘೆರಾವೋ ಮುಕ್ತಾಯವಾಯಿತು. ಈ ಹೋರಾಟದಲ್ಲಿ ಸಹಸ್ರಾರು ಕಾರ್ಮಿಕರು ಪಾಲ್ಗೊಂಡಿದ್ದರು.

ತಾರೀಖು 2-4-81ರಂದು ರಾಜ್ಯ ಬೀಡಿ ಕಾರ್ಮಿಕರ ಪ್ರತಿನಿಧಿಗಳ ಸಭೆಯು ಬೆಂಗಳೂರಿನಲ್ಲಿ ಸೇರಿ ಪ್ರಸಕ್ತ ಪರಿಸ್ಥಿತಿಗಳ ಬಗ್ಗೆ ಚರ್ಚಿಸಿ ತಾ. 13-4-81 ರಿಂದ 19-4-81ರವರೆಗೆ ರಾಜ್ಯಾದ್ಯಂತ ಬೀಡಿ ಕಾರ್ಖಾನೆಗಳ ಹಾಗೂ ಸರ್ಕಾರಿ ಕಛೇರಿಗಳ ಪಿಕೆಟಿಂಗ್ ಅನ್ನು ನಡೆಸುವ ಮುಖಾಂತರ ಸರ್ಕಾರದ ಅಸಡ್ಡೆ ಹಾಗೂ ಮಾಲೀಕರ ಹಠಮಾರಿತನವನ್ನು ಬಯಲಿಗೆಳೆಯಬೇಕೆಂದು ತೀರ್ಮಾನಿಸಿರುತ್ತೆ.

ಈ ಮಧ್ಯೆ ರಾಜ್ಯಸರ್ಕಾರ ನೇಮಿಸಿರುವ ಕನಿಷ್ಠ ವೇತನ ಸಮಿತಿಯು ತಾ. 26-3-81ರಂದು ಸೇರಿ ಕನಿಷ್ಠ ವೇತನ ಕಾಯಿದೆಗೆ ಒಳಪಡುವ ಕಾರ್ಮಿಕರು ಅಂದರೆ ಬೀಡಿ, ಅಗರಬತ್ತಿ, ಹೆಂಚು, ತೋಟಗಾರಿಕೆ ಮತ್ತು ಬೇಸಾಯ ಇತ್ಯಾದಿ ವಿಭಾಗದ ಕಾರ್ಮಿಕರಿಗೆ ಇಂದಿನ ಧಾರಣೆವಾಸಿಯನ್ನು ಗಮನಿಸಿ. 10-35 ಪೈಸೆ ಕನಿಷ್ಠ ದಿನಕೂಲಿಯಾಗಬೇಕೆಂದು ಅಭಿಪ್ರಾಯಪಟ್ಟಿದೆ. ಈ ಅಭಿಪ್ರಾಯವನ್ನು ಸಾವಿರ ಬೀಡಿಗೆ 12-00ರೂ. ಮಜೂರಿ ಬೇಡಿಕೆಯಿಂದಲೂ ಕಡಿಮೆಯಾಗಿದೆ. ಕನಿಷ್ಠ ವೇತನ ಸಮಿತಿಯ ಅಭಿಪ್ರಾಯವನ್ನು ತಡೆಗಟ್ಟುವ ಪ್ರಯತ್ನವು ಮಾಲೀಕವರ್ಗದಿಂದ ನಡೆಯುವುದು ಇಂದಿನ ಬಂಡವಾಳಶಾಹಿ ಸಮಾಜದಲ್ಲಿ ಸಹಜವೆಂದು ಕಾರ್ಮಿಕ ವರ್ಗವು ತಿಳಿದುಕೊಳ್ಳಬೇಕಾಗಿದೆ. ಕನಿಷ್ಠ ವೇತನ ಸಮಿತಿಯ ಶಿಫಾರಸ್ಸನ್ನು ಗೆಜೆಟ್ ನೋಟಿಫಿಕೇಷನ್ ಮಾಡಿಸಲೂ ಸಹ ಕಾರ್ಮಿಕರು ನಿರಂತರ ಬಲಿಷ್ಠ ಹೋರಾಟ ನಡೆಸಬೇಕಾಗುತ್ತದೆ. ಈ ಸಂಬಂಧ ಕನಿಷ್ಠ ವೇತನಕ್ಕೆ ಒಳಪಡುವ ವಿವಿಧ ಕೈಗಾರಿಕೆಗಳ ಕಾರ್ಮಿಕ ಪ್ರತಿನಿಧಿಗಳ ಪ್ರಥಮ ಸಮ್ಮೇಳನವು ತಾ. 26-4-81ರಂದು ಬೆಂಗಳೂರಿನಲ್ಲಿ ಕರೆದಿದೆ. ಈ ಸಮ್ಮೇಳನಕ್ಕೆ ಬೀಡಿ ಕಾರ್ಮಿಕರ ಪ್ರತಿನಿಧಿಗಳನ್ನು ರಾಜ್ಯದ ಎಲ್ಲಾ ಕಡೆಗಳಿಂದಲೂ ಕಳುಹಿಸುವ ಸಿದ್ಧತೆ ಈಗಿನಿಂದಲೇ ಮಾಡಬೇಕಾಗಿದೆ.

●

"ವೈದ್ಯರ ನಿರ್ಲಕ್ಷ್ಯದಿಂದ ಪೊಡಿಯನ ಸಾವು"

ಭ್ರಷ್ಟ ವೈದ್ಯರ ವಿರುದ್ಧ ಪ್ರತಿಭಟನೆ

ಹುಚ್ಚುನಾಯಿ ಕಡಿತಕ್ಕೊಳಗಾದ ಹರಿಜನ ಯುವಕ ಪೊಡಿಯನಿಗೆ ಹಣ ಕೊಡದೆ ಔಷಧಿಕೊಡಲು ನಿರಾಕರಿಸಿದ ಲಂಚಕೋರ ವೈದ್ಯರ ಕ್ರಮದಿಂದ ಆತ ಏಪ್ರಿಲ್ 4ರಂದು ಸಾವನ್ನಪ್ಪಬೇಕಾಯಿತು. 30ರ ಹರೆಯದ ಪೊಡಿಯನಿಗೆ ಕೊನೆಯ ಗಳಿಗೆಯಲ್ಲಿ ಪ್ರಾಣಹೋಗುತ್ತಿದೆ ಎನ್ನುವಾಗಲೂ ಔಷಧಕೊಡಲು ವೈದ್ಯರು ನಿರಾಕರಿಸಿದರು. ದ. ಕ. ಜಿಲ್ಲೆಯ ಮಲೆನಾಡು ಪ್ರದೇಶದ ಸುಳ್ಯ ತಾಲ್ಲೂಕಿನ ಸುಳ್ಯ ಸರಕಾರಿ ವೈದ್ಯರ ಈ ಅಮಾನುಷ ವರ್ತನೆ ಮತ್ತು ಲಂಚಕೋರ ನೀತಿಯ ವಿರುದ್ಧ ಜನತೆ ಸಿಡಿದೆದ್ದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸುಳ್ಯ ಘಟಕದ ನೇತೃತ್ವದಲ್ಲಿ ಕಾರ್ಮಿಕರು, ಜನಸಾಮಾನ್ಯರು ಮತ್ತು ಊರಿನ ಜನತೆ ಪ್ರತಿಭಟನೆ ನಡೆಸಿತು. ವೈದ್ಯರನ್ನು ಘೆರಾವೊಮಾಡಿ ಜನತೆ ತನ್ನ ಸಿಟ್ಟನ್ನು ಪ್ರದರ್ಶಿಸಿತು. ಇದೇ ಸರಕಾರಿ ಆಸ್ಪತ್ರೆಯಲ್ಲಿರುವ ಲಂಚಕೋರತನ ಮತ್ತು ರೋಗಿಗಳನ್ನು ತುಂಬಾ ಕೆಟ್ಟ ರೀತಿಯಲ್ಲಿ ಕಾಣುತ್ತಿದ್ದ ಮಹಿಳಾ ವೈದ್ಯರು ಅಂದು ಆಸ್ಪತ್ರೆಗೆ ಬಾರದೇ ತಪ್ಪಿಸಿಕೊಂಡರು. ಉನ್ನತ ಪೋಲೀಸು ಅಧಿಕಾರಿಗಳ ಮಧ್ಯಪ್ರವೇಶದಿಂದ ಪರಿಸ್ಥಿತಿಯು ಹತೋಟಿಗೆ ಬಂತು. ವೈದ್ಯರನ್ನು ಠಾಣೆಗೆ ಕರೆದೊಯ್ಯಲಾಯಿತು. ಪ್ರತಿಭಟನಾ ಮೆರವಣಿಗೆ, ಕಾರ್ಯಕ್ರಮಗಳಿಗೆ ನೇತೃತ್ವವನ್ನು ಕಾಂ. ಸೂರ್ಯನಾರಾಯಣ ಭಟ್, ಕಾಂ. ಪಿ. ಕೆ. ಮೂಸ, ಕಾಂ. ಸರಸ್ವತಿ ಮೊದಲಾದವರು ವಹಿಸಿದ್ದರು.

ಪರಿಸ್ಥಿತಿಯ ಗಂಭೀರತೆಯನ್ನು ಅರ್ಥಮಾಡಿ ಜಿಲ್ಲಾಧಿಕಾರಿಗಳು ಮತ್ತು ಇತರ ಅಧಿಕಾರಿಗಳು ಸುಳ್ಯಕ್ಕೆ ಭೇಟಿನೀಡಿ, ಸ್ಥಳೀಯ ಸಿ.ಪಿ.ಐ.(ಎಂ) ಮುಂದಾಳುಗಳೊಂದಿಗೆ ವಿಚಾರ ವಿನಿಮಯ ನಡೆಸಿದರು. ವೈದ್ಯರುಗಳ ಮೇಲೆ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳುವ ಆಶ್ವಾಸನೆ ಇತ್ತರು. ಇದೀಗ ಸುಳ್ಯಕ್ಕೆ ಬೇರೆಯೇ ವೈದ್ಯರುಗಳ ವ್ಯವಸ್ಥೆ ಮಾಡಲಾಗಿದೆಯೆಂದೂ. ಹುಚ್ಚುನಾಯಿ ಕಡಿತಕ್ಕೆ ಔಷಧ ವ್ಯವಸ್ಥೆಮಾಡಲಾಗಿದೆಯೆಂದೂ ಜಿಲ್ಲಾಧಿಕಾರಿಯವರು ಹೇಳಿಕೆ ಇತ್ತಿರುವರು. ಪೊಡಿಯನ ಸಾವು ಮತ್ತು ಪ್ರತಿಭಟನೆಯೊಂದಿಗೆ ಸುಳ್ಯ ಸರಕಾರಿ ಆಸ್ಪತ್ರೆಯ ವೈದ್ಯರುಗಳು ಅನೇಕ ಮಂದಿಯಿಂದ ಹಣಕೇಳಿದ ಘಟನೆಗಳು ಇದೀಗ ಬೆಳಕಿಗೆ ಬಂದಿವೆ. ವೈದ್ಯರುಗಳ ಅಲಕ್ಷದಿಂದ ಭಾಗೀರಥಿ ಎಂಬ ಮಹಿಳೆ ಸತ್ತ ವರದಿಯಾಗಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ನಡೆಸಿದ ಪ್ರತಿಭಟನೆಯ ಬಗ್ಗೆ ಊರಿನ ಜನರೆಲ್ಲಾ ಮೆಚ್ಚುಗೆ ವ್ಯಕ್ತಪಡಿಸಿರುವರು. ಭ್ರಷ್ಟಾಚಾರದ ವಿರುದ್ಧ, ಶೋಷಣೆಗೊಳಗಾದ ಜನತೆಯ ವಿರುದ್ಧ ನಡೆಯುವ ಮೋಸ ಹಾಗೂ ದೌರ್ಜನ್ಯಗಳ ವಿರುದ್ಧ ರಾಜ್ಯದ ಎಲ್ಲೆಡೆಗಳಲ್ಲೂ ಸಂಘಟಿತ ಚಳುವಳಿ ನಡೆಸಲು ಸುಳ್ಯದಲ್ಲಿ ಪಕ್ಷದ ಘಟಕವು ನಡೆಸಿದ ಪ್ರತಿಭಟನೆ ಸ್ಫೂರ್ತಿ ಈಯುತ್ತಿದೆ. ಪೊಡಿಯನ ಕುಟುಂಬಕ್ಕೆ ಪರಿಹಾರ, ಸಹಾಯಕೊಡಲು ಪ್ರಯತ್ನಗಳು ನಡೆಯುತ್ತಿವೆ.

●

ಸೋವಿಯೆಟ್ ಯೂನಿಯನ್ ಕಮ್ಯುನಿಸ್ಟ್ ಪಾರ್ಟಿಯ ೨೬ನೇ ಸಮ್ಮೇಳನ ಕುರಿತು

[ಹಿಂದಿನ ಸಂಚಿಕೆಯಿಂದ]

ಮೂಲ ತತ್ವಗಳಿಗೇ ಅಪಾಯ

ಈಗಿರುವ ಅಲಿಪ್ತ ಚಳುವಳಿ 1960-70ರ ಅವಧಿಗೆ ಹೋಲಿಸಿದರೆ ಬಹಳ ಬದಲಾವಣೆ ಕಂಡಿದೆ. ಚಳುವಳಿಯಲ್ಲಿರುವ ದೇಶಗಳ ಸಂಖ್ಯೆ ನೂರನ್ನು ಮೀರಿದ್ದರೂ ಅದರ ಸಾಮ್ರಾಜ್ಯಶಾಹೀ ವಿರೋಧೀ ಸತ್ತ್ವ ಕಡಿಮೆಯಾಗಿದೆ. "ಸಾಮ್ರಾಜ್ಯಶಾಹೀ ಧೋರಣೆಗಳಿಗನುಗುಣವಾಗಿ ನಡೆಯುವ" ಕೆಲವು ದೇಶಗಳ ಪ್ರವೇಶದಿಂದ ಹೀಗಾಗಿದೆ. ಇವುಗಳ ಪೈಕಿ ಹಲವು ದೇಶಗಳು ಮತ್ತು ಅಲ್ಲಿನ ಸರಕಾರಗಳು ಅಭಿವೃದ್ಧಿಯ ಬಂಡವಾಳಶಾಹೀ ಮಾರ್ಗವನ್ನನುಸರಿಸುವುದು ಮಾತ್ರವಲ್ಲ-ದೇಶದೊಳಗಡೆ ಊಳಿಗಮಾನ್ಯ ಹಾಗೂ ಬಂಡವಾಳ ಪೂರ್ವ ಸಂಬಂಧಗಳೊಡನೆ ಒಪ್ಪಂದ ಮಾಡಿಕೊಂಡು-ತಮ್ಮ ಆಂತರಿಕ ಧೋರಣೆಗಳಲ್ಲಿ ಹೆಚ್ಚೆಚ್ಚಾಗಿ ಸ್ಪಷ್ಟ ರೂಪದಲ್ಲಿ ಕಮ್ಯುನಿಸ್ಟ್ ವಿರೋಧಿಗಳಾಗುತ್ತಿವೆ.

"ಮಹಾಶಕ್ತಿಗಳು" ಎಂಬ ಲಗಾಮಿಲ್ಲದ ಸಡಿಲವಾದ ಮಾತುಗಳಲ್ಲಿ ಸಮಾಜವಾದೀ ಸೋವಿಯೆಟ್ ಸಂಘವನ್ನು ಸಾಮ್ರಾಜ್ಯಶಾಹೀ ಅಮೇರಿಕಾದೊಡನೆ ಸರಿದೂಗಿಸಲಾಗುತ್ತಿದೆ. ಮತ್ತು ವಸಾಹತುಶಾಹೀ ಶೋಷಣೆಯ ನಿರ್ಮೂಲನದ ಪ್ರಶ್ನೆಯನ್ನು "ಶ್ರೀಮಂತ ಉತ್ತರ ಬಡ ದಕ್ಷಿಣ"ದ ನಡುವಿನ ಸ್ಪರ್ಧೆಯಾಗಿ ಮಾತ್ರ ಕಾಣಲಾಗುತ್ತಿದೆ. ಈ ಮೂಲಕ ಪೂರ್ವ ಯೂರೋಪಿನ ಸಮಾಜವಾದೀ ದೇಶಗಳು ಹಾಗೂ ಸೋವಿಯೆಟ್ ಸಂಘವನ್ನು ಅಭಿವೃದ್ಧಿ ಹೊಂದಿದ ಬಂಡವಾಳಶಾಹೀ ಹಾಗೂ ಸಾಮ್ರಾಜ್ಯಶಾಹೀ ಪ್ರಭುತ್ವಗಳನ್ನು ಒಂದೇ ತಕ್ಕಡಿಯಲ್ಲಿ ತೂಗುವ ಈ ಧೋರಣೆ ಅಲಿಪ್ತ ಚಳುವಳಿಯ ಮೂಲ ತತ್ವಗಳನ್ನೇ ನಮಗರಿಪಿಲ್ಲದಂತೆ ಕಬಳಿಸುತ್ತಿದೆ.

ಲಿಯೋನಿಡ್ ಬ್ರೆಜ್ನೇವ್ 26ನೇ ಸಮ್ಮೇಳನದಲ್ಲಿ ಮಂಡಿಸಿದ ತಮ್ಮ ವರದಿಯಲ್ಲಿ ಅಲಿಪ್ತ ಚಳುವಳಿಯ ಬಗ್ಗೆ-"ಅದರ ಶಕ್ತಿ ಹೊಮ್ಮಿಬಂದಿರುವುದು ಸಾಮ್ರಾಜ್ಯಶಾಹೀ ಹಾಗೂ ವಸಾಹತುಶಾಹೀ ವಿರೋಧಿ ಮತ್ತು ಯುದ್ಧ ಹಾಗೂ ಆಕ್ರಮಣ ವಿರೋಧೀ ನಿಲುವಿನಿಂದಲೇ" ಎಂದು ಸರಿಯಾಗಿಯೇ ಹೇಳಿದ್ದಾರೆ. ವಸಾಹತುಶಾಹಿ ವಿರೋಧದ ಬದಲು ಸೋವಿಯೆಟ್ ವಿರೋಧೀ ಕಮ್ಯುನಿಸ್ಟ್ ವಿರೋಧೀ ಭಾವನೆ ಅಲಿಪ್ತ ಚಳುವಳಿಯ ಯೋಜನಾ ಪ್ರಕ್ರಿಯೆಯಲ್ಲಿ ಹಾಗೂ ಚಟುವಟಿಕೆಗಳಲ್ಲಿ ಪ್ರಾಬಲ್ಯ ಹೊಂದುವುದಾದರೆ ಅಲಿಪ್ತ ಚಳುವಳಿ ಜಾಗತಿಕ ರಾಜಕೀಯದಲ್ಲಿ ತನ್ನ ಪಾತ್ರನಿರ್ವಹಿಸುವುದರಲ್ಲಿ ಸೋಲುತ್ತದೆ. ಸಾಮ್ರಾಜ್ಯಶಾಹೀ, ವಸಾಹತುಶಾಹೀ, ಯುದ್ಧ ಹಾಗೂ ಆಕ್ರಮಣ ವಿರೋಧಿ 'ಮೂಲಭೂತ ತತ್ವಗಳಿಂದ' ಅದು ದೂರ ಸರಿದಂತಾಗುತ್ತದೆ.

ಈ ಹಿಂದಿನ ತಿಳುವಳಿಕೆ

ಎಪ್ಪತ್ತರ ದಶಕದ ಮಧ್ಯಾವಧಿಯ ಹಲವು ಸೋವಿಯೆಟ್ ನಾಯಕರ ಹಲವು ಹೇಳಿಕೆಗಳು, ಹಲವು ಸುಪ್ರಸಿದ್ಧ ಸೋವಿಯೆಟ್ ಲೇಖಕರ ಲೇಖನಗಳು ಹೊಸದಾಗಿ ವಿಮೋಚನೆಗೊಂಡ ದೇಶಗಳು ಬಂಡವಾಳಶಾಹಿಯಲ್ಲದ ಮಾರ್ಗವನ್ನನುಸರಿಸಿ ಮುಂದುವರಿದಿವೆ ಎಂದು ಸಾರಿದ್ದವು. ಇಂತಹ ಬರವಣಿಗೆಗಳಿಂದ ಆಯ್ದು ಒಂದು ಅಭಿಪ್ರಾಯದಲ್ಲಿ ಹೀಗೆ ಹೇಳಲಾಗಿದೆ-"ವಸಾಹತುಶಾಹೀ ಸಂಕೋಲೆ ಕಳಚಿದ 100 ದೇಶಗಳಲ್ಲಿ ಸುಮಾರು ಒಟ್ಟು 12 ಕೋಟಿ ಜನಸಂಖ್ಯೆಯಾಗುವ ಹನ್ನೆರಡರಷ್ಟು ದೇಶಗಳು ಸಮಾಜವಾದೀ ಪರಿವರ್ತನೆಗೆ ಅಗತ್ಯವಾದ ಪ್ರಮುಖ ಸಾಮಾಜಿಕ ಸುಧಾರಣಾ ಕ್ರಮಗಳನ್ನು ಕೈಗೊಂಡಿವೆ. ಇವುಗಳಲ್ಲಿ ಅಲ್ಜೀರಿಯಾದ ಜನತಾ ಪ್ರಜಾಪ್ರಭುತ್ವವಾದೀ ಗಣರಾಜ್ಯ, ಬರ್ಮಾ ಸಂಘದ ಸಮಾಜವಾದೀ ಗಣರಾಜ್ಯ, ಗಿನೀ ಗಣರಾಜ್ಯ, ಮೊಜಾಂಬಿಕ್‌ನ ಜನತಾ ಗಣರಾಜ್ಯ, ಕಾಂಗೋ ಜನತಾ ಗಣರಾಜ್ಯ, ಯೆಮೆನ್ ಜನತಾ ಪ್ರಜಾಪ್ರಭುತ್ವವಾದೀ ಗಣರಾಜ್ಯ, ಸಿರಿಯನ್ ಅರಬ್ ಗಣರಾಜ್ಯ, ತಾಂಜಾನಿಯಾ ಸಂಯುಕ್ತ ಗಣರಾಜ್ಯ ಇತ್ಯಾದಿ ದೇಶಗಳ ಧೋರಣೆಗಳು ಸಮಾಜವಾದೀ ಉನ್ಮುಖತೆ ಕ್ರಮೇಣ ಬಲಗೊಳ್ಳುತ್ತಿದೆ" ಇತ್ಯಾದಿಯಾಗಿ ಹೇಳಲಾಗಿತ್ತು. ಅಲ್ಲದೆ "ಮಡಗಾಸ್ಕರ್‌ನ ಜನತಾಂತ್ರಿಕ ಗಣರಾಜ್ಯ ಗಿನಿಬಿಸಾವು ಗಣರಾಜ್ಯ, ಬೆನಿನ್ ಜನತಾ ಗಣರಾಜ್ಯ, ಲಾವೋ ಜನತಾ ಗಣರಾಜ್ಯ ಈ ದೇಶಗಳಲ್ಲಿ ಈ ರೀತಿಯ ಮಾರ್ಗಾವಲಂಬನೆ ಕಡೆಗೆ ತೀವ್ರ ಪರಿವರ್ತನೆಯಾಗುತ್ತಿದೆ" ಎಂದೂ ಹೇಳಲಾಗಿತ್ತು. 1971ರಷ್ಟು ಹೊತ್ತಿಗೇ CPSUನ 24ನೇ ಸಮ್ಮೇಳನದ ಕೇಂದ್ರಸಮಿತಿಯ ವರದಿಯಲ್ಲಿ ಹೆಚ್ಚೆಚ್ಚು ಸಂಖ್ಯೆಯ ದೇಶಗಳು ಸಮಾಜವಾದೀ ಮಾರ್ಗವನ್ನವಲಂಬಿಸುವ ಸಂಭಾವನೆಯ ಬಗ್ಗೆ ಹೇಳಲಾಗಿತ್ತು. ಈ ವರದಿ ಏಷ್ಯಾ ಮತ್ತು ಆಫ್ರಿಕಾದ ನವ ವಿಮೋಚಿತ ದೇಶಗಳ ಬಗ್ಗೆ ಮಾತನಾಡುತ್ತಾ-"ಮುಖ್ಯ ಅಂಶವೆಂದರೆ ಹಲವು ದೇಶಗಳಲ್ಲಿನ ರಾಷ್ಟ್ರೀಯ ವಿಮೋಚನಾ ಹೋರಾಟಗಳು ಕಾರ್ಯತಃ ಊಳಿಗಮಾನ್ಯ ಹಾಗೂ ಬಂಡವಾಳಶಾಹೀ ಇವೆರಡೂ ಶೋಷಣಾ ಸಂಬಂಧಗಳ ವಿರೋಧಿಯಾದ ಹೋರಾಟಗಳಾಗಿಯೂ ಬೆಳೆಯಲಾರಂಭಿಸಿವೆ" ಎಂದು ಹೇಳಿತ್ತು.

ಮುಂದುವರಿದು "ಇಂದು ಈಗಾಗಲೇ ಆಫ್ರಿಕಾ ಹಾಗೂ ಏಷ್ಯಾದಲ್ಲಿ ಬಂಡವಾಳಶಾಹಿಯಲ್ಲದ ಅಭಿವೃದ್ಧಿ ಮಾರ್ಗವನ್ನನುಸರಿಸಿದ ಅಂದರೆ ದೀರ್ಘಾವಧಿಯಲ್ಲಿ ಸಮಾಜವಾದೀ ಸಮಾಜದ ನಿರ್ಮಾಣದ ಮಾರ್ಗವನ್ನನುಸರಿಸಿರುವ ದೇಶಗಳ ಸಂಖ್ಯೆ ಸಾಕಷ್ಟಿದೆ. ಹಲವು ದೇಶಗಳು ಈ ಮಾರ್ಗವನ್ನವಲಂಬಿಸಿವೆ. ಸಂಯುಕ್ತ ಅರಬ್ ಗಣರಾಜ್ಯದಂತಹ ದೇಶಗಳಲ್ಲಿ ಈಗ ಸರಕಾರೀ ವಲಯ ಕೈಗಾರಿಕಾ ಉತ್ಪನ್ನದ 85% ಪಾಲನ್ನು ಪಡೆದಿವೆ. ಬರ್ಮಾದಲ್ಲಿ ಗಣಿ ಸಂಬಂಧೀ ಕ್ಷೇತ್ರಗಳಲ್ಲಿ 80%ಕ್ಕಿಂತಲೂ ಹೆಚ್ಚು ಹಾಗೂ ಉತ್ಪಾದನಾ ಕ್ಷೇತ್ರದಲ್ಲಿ 60% ದಷ್ಟರ ಮೇಲೆ ಸರಕಾರೀ ಹತೋಟಿಯಿದೆ. ಅಲ್ಜೀರಿಯಾದಲ್ಲಿ ಸಾಮ್ರಾಜ್ಯಶಾಹೀ ಆಸ್ತಿಯನ್ನು ರಾಷ್ಟ್ರೀಕರಿಸುವ ಗಂಭೀರ

ಎಂ. ಬಸವಪುನ್ನಯ್ಯ

ಕ್ರಮಗಳನ್ನು ಕೈಗೊಳ್ಳಲಾಗಿದೆ. ಹಲವು ವಿದೇಶಿ ಸಂಸ್ಥೆಗಳು, ಬ್ಯಾಂಕುಗಳು ಹಾಗೂ ವ್ಯಾಪಾರೀ ಕಂಪೆನಿಗಳನ್ನು ಗಿನಿ, ಸುಡಾನ್, ಸೋಮಾಲಿಯಾ ಹಾಗೂ ತಾಂಜಾನಿಯಾಗಳಲ್ಲಿ ಸರಕಾರೀ ಹತೋಟಿಗೆ ಒಪ್ಪಿಸಲಾಗಿದೆ" ಎಂದು ವರದಿಯಲ್ಲಿ ಹೇಳಲಾಗಿತ್ತು. "ಕಳೆದ ಐದು ವರ್ಷಗಳ ಅವಧಿಯನ್ನೇ ತಗೊಳ್ಳುವುದಾದರೆ ಅರಬ್ ಸಂಯುಕ್ತ ಗಣರಾಜ್ಯ ಹಾಗೂ ಸಿರಿಯಾದಲ್ಲಿ ಮಹತ್ವಪೂರ್ಣ ಕೃಷಿ ಬದಲಾವಣೆಗಳನ್ನು ಜಾರಿಗೆ ತರಲಾಗಿದೆ; ಸುಡಾನ್ ಹಾಗೂ ಸೋಮಾಲಿಯಾದಲ್ಲಿ ಪ್ರಾರಂಭಿಸಲಾಗಿದೆ".

"ಪ್ರಗತಿಶೀಲ ಸಾಮಾಜಿಕ ಬದಲಾವಣೆ ಎಲ್ಲಾ ಮಾಜೀ ವಸಾಹತುಗಳಲ್ಲಿ ಹಾಗೂ ಪರತಂತ್ರ ದೇಶಗಳಲ್ಲಿ ಆ ಹಂತದವರೆಗೆ ಮುಂದುವರಿದಿಲ್ಲವಾದರೂ ಇತ್ತೀಚೆಗೆ ಭಾರತದಲ್ಲಿ ದೊಡ್ಡ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿದ ಹಾಗೂ ಭಾರತದ ಸಂಸತ್ತಿನ ಲೋಕಸಭೆಯಲ್ಲಿ ಬಲಗಾಮೀ ಶಕ್ತಿಗಳ ಮೇಲೆ ಸಾಧಿಸಿದ ಗಣನೀಯ ವಿಜಯದ ಘಟನೆಗಳನ್ನು ಉದಾಹರಣೆಯಾಗಿ ಇಲ್ಲಿ ನೆನಪಿಸಿಕೊಂಡರೆ ಸಾಕು. ಆ ದೇಶದ ಜನಸಾಮಾನ್ಯರು ಪ್ರತಿಕ್ರಿಯಾವಾದೀ ಸಾಮ್ರಾಜ್ಯಶಾಹೀ ಪರವಾದ ಶಕ್ತಿಗಳನ್ನು ದೃಢವಾಗಿ ವಿರೋಧಿಸುತ್ತಾರೆ ಮತ್ತು ಭೂಸುಧಾರಣೆಯ ಅನ್ವಯ ಹಾಗೂ ಇತರ ಸಾಮಾಜಿಕ-ಆರ್ಥಿಕ ಬದಲಾವಣೆಯ ಬೆಂಬಲಿಗರಾಗಿದ್ದಾರೆ ಎಂಬುದಕ್ಕೆ ಇದು ಸಾಕ್ಷಿ...... "ಸಿಂಹಳ ಹಾಗೂ ನೈಜೀರಿಯಾದಲ್ಲೂ ಸಾಕಷ್ಟು ಸಾಮಾಜಿಕ ಪರಿವರ್ತನೆ ಆಗಿದೆ" ಎಂದು ಈ ವರದಿ ಹೇಳಿತ್ತು.

1970 ಹಾಗೂ 1980ರ ಅವಧಿಯಲ್ಲಿ ಮಾಜೀ ವಸಾಹತುಗಳು ಸಮಾಜವಾದೀ ಅಭಿವೃದ್ಧಿ ಮಾರ್ಗ ಹಿಡಿದಿರುವ ಬಗೆಗಿನ ಭವಿಷ್ಯವಾಣಿ ಸಾಕಾರವಾಗಲಿಲ್ಲ. ನವ ವಿಮೋಚಿತ ದೇಶಗಳ ಸಾಮಾಜಿಕ–ಆರ್ಥಿಕ ಬೆಳವಣಿಗೆಗಳು, ಆದೇಶಗಳಲ್ಲಿನ ಕಮ್ಯುನಿಸ್ಟ್ ಹಾಗೂ ಇತರ ಪ್ರಗತಿಶೀಲ ಶಕ್ತಿಗಳು ಮಾಡಬೇಕಾದ ಕೆಲಸಗಳ ಬಗ್ಗೆ ಸರಿಯಾದ ಮತ್ತು ವಸ್ತುನಿಷ್ಟವಾದ ಮರುಪರಿಶೀಲನೆ ನಡೆಸಿದರೆ ಅದರಿಂದ CPSU ಗಾಗಲೀ, ಜಾಗತಿಕ ಚಳುವಳಿಗಾಗಲೀ ನಷ್ಟವೇನಿಲ್ಲ. ನಮ್ಮ ದೃಷ್ಟಿಯಲ್ಲಿ 26ನೇ ಸಮ್ಮೇಳನದ ವರದಿ ಈ ನಿರೀಕ್ಷೆಗಳನ್ನು ಈಡೇರಿಸಿಲ್ಲ. ಅಂಗೋಲಾ, ಇಥಿಯೋಪಿಯಾ, ಮೊಜಾಂಬಿಕ್, ಅಫಘಾನಿಸ್ತಾನ ಹಾಗೂ ಯೆಮೆನ್‌ನ ಜನತಾಂತ್ರಿಕ ಗಣರಾಜ್ಯದಂತಹ ದೇಶಗಳನ್ನು ಹೆಸರಿಸುವಷ್ಟಕ್ಕೇ ತೃಪ್ತವಾಗಿದೆ. 12 ಕೋಟಿಗೂ ಮಿಕ್ಕಿದ ಜನಸಂಖ್ಯೆಯ ಹನ್ನೆರಡಕ್ಕಿಂತ ಹೆಚ್ಚು ದೇಶಗಳು ಸಮಾಜವಾದೀ ಮಾರ್ಗವನ್ನವಲಂಬಿಸಿವೆ ಎಂಬ ಮಾತು "ಹಲವು ದೇಶಗಳು ಈಗ ಈ ಮಾರ್ಗವನ್ನವಲಂಬಿಸಿವೆ" ಎಂದು 1971ರ ಮಾರ್ಚ್ 30ರಷ್ಟು ಹಿಂದೇನೇ ಮಾಡಿದ ಪ್ರತಿಪಾದನೆ ಇವೆಲ್ಲದರ ಬದಲಾಗಿ ಈಗ ಮೇಲೆ ಹೇಳಿದ ನಾಲ್ಕೈದು ದೇಶಗಳನ್ನು ಹೆಸರಿಸಲಾಗಿದೆ. ಈ ಬಗ್ಗೆ ಸರಿಯಾದ ವಿಶ್ಲೇಷಣೆ ಹಾಗೂ ವಿವರಣೆ ಅಗತ್ಯವಾಗಿದೆ.

ಬ್ರೆಜ್ನೇವ್‌ರ ವರದಿ ಜಾಗತಿಕ ಸಮಾಜವಾದೀ ವ್ಯವಸ್ಥೆಯ, ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳವಳಿಯ ಹಾಗೂ ಅಲಿಪ್ತ ಚಳವಳಿಯ ಬೆಳವಣಿಗೆ ಬಗ್ಗೆ ಮತ್ತು ಅದೇ ಸಮಯದಲ್ಲಿ ಅವುಗಳ ನ್ಯೂನತೆ, ತೊಂದರೆ ಹಾಗೂ ಅವುಗಳ ನಡುವಿನ ಬಡಕುಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿದೆ.

ಶಾಂತಿ, ಪ್ರಜಾಪ್ರಭುತ್ವ, ರಾಷ್ಟ್ರೀಯ ಸ್ವಾತಂತ್ರ್ಯ ಹಾಗೂ ಸಮಾಜವಾದದ ಜಾಗತಿಕ ಹೋರಾಟದ ಸಧ್ಯದ ಪರಿಸ್ಥಿತಿಯ ಈ ನೇತ್ಯಾತ್ಮಕ ಲಕ್ಷಣಗಳನ್ನು ಬ್ರೆಜ್ನೇವ್‌ರ ವರದಿ ಸಾಕಷ್ಟು ಒಳಗೊಂಡಿಲ್ಲವೆಂದು ನಮ್ಮ ಅಭಿಪ್ರಾಯ. ಬಹುಶಃ ಇದಕ್ಕೆ ಕಾರಣ CPSUಗೇ ಗೊತ್ತು. ಆದರೆ ಶಾಂತಿ, ಸಮಾಜವಾದಕ್ಕಾಗಿ ಹಾಗೂ ಸಾಮ್ರಾಜ್ಯಶಾಹಿಯ ವಿರುದ್ಧ ಜಗತ್ತಿನಾದ್ಯಂತ ನಡೆಯುವ ಹೋರಾಟಗಳು ಮುನ್ನಡೆ ಸಾಧಿಸಲು ಶಕ್ಯವಾಗಬೇಕಾದರೆ ಜಾಗತಿಕ ಚಳುವಳಿಯ ತೊಂದರೆಗಳು ಹಾಗೂ ಒಡಕಿನ ಕಾರಣಗಳನ್ನು ಸಮಚಿತ್ತದಿಂದ ಪರಿಶೀಲಿಸಬೇಕು ಮತ್ತು ಅವನ್ನು ಪರಿಹರಿಸುವ ಮಾರ್ಗೋಪಾಯಗಳ ಬಗ್ಗೆ ಸದಾ ಹುಡುಕಾಟ ನಡೆಸಿ ದಾರಿ ಕಂಡುಕೊಳ್ಳಬೇಕು ಎಂಬುದು ನಮ್ಮ ಅಭಿಪ್ರಾಯ.

ಈ ಭಿನ್ನಾಭಿಪ್ರಾಯಗಳನ್ನು ಅತಿರೇಕಗೊಳಿಸಿ ಮಂಡಿಸುವುದು ಸರಿಯೂ ಅಲ್ಲ, ಅದು ಹಾನಿಕಾರಕ ಕೂಡಾ ಎಂಬುದು ನಿಜವೇ. ಈ ಭಿನ್ನಾಭಿಪ್ರಾಯಗಳು ಒಂದು ಬೆಳೆಯುತ್ತಿರುವ ಚಳವಳಿಯಲ್ಲಿ ಸಾಮಾನ್ಯವಾಗಿ ಕಂಡುಬರುವಂತವುಗಳೆಂದೋ ಅಥವಾ ಅವು ಕೆಲವು ನಾಯಕರು ವೈಯುಕ್ತಿಕವಾಗಿ ದಾರಿತಪ್ಪಿದುದರ ಅಥವಾ ಕೆಲವು ಕಮ್ಯುನಿಸ್ಟ್ ಪಕ್ಷಗಳು ತಮ್ಮ ದಾರಿಯಿಂದ ದೂರ ಸರಿದುದರ ಪರಿಣಾಮವೆಂದೋ ಪರಿಗಣಿಸಿದರೆ ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳು ಹಾಗೂ CPSUನಂತಹ ಅವರ ದೊಡ್ಡ ದಳಗಳು ತಮ್ಮ ಕರ್ತವ್ಯದಲ್ಲಿ ತಪ್ಪಿದಂತೆಯೇ ಎನ್ನುವುದೂ ಅಷ್ಟೇ ನಿಜ.

ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿ ಹಾಗೂ ಸಮಾಜವಾದೀ ದೇಶಗಳನ್ನು ಈಗ ಪೀಡಿಸುತ್ತಿರುವ ಈ ಭಿನಾಭಿಪ್ರಾಯಗಳು ಹಾಗೂ ಒಡಕುಗಳು ನಿಜವಾಗಿ ಆತಂಕಕಾರಿಯಾಗಿವೆ. ಅಲ್ಲದೆ ಜಾಗತಿಕ ಶಾಂತಿ, ಸ್ವಾತಂತ್ರ್ಯ ಹಾಗೂ ಸಮಾಜವಾದದ ಉದ್ದೇಶಗಳಿಗೆ ತೀವ್ರ ಹಾನಿಯುಂಟುಮಾಡುತ್ತಿವೆ. ಸಮಾಜವಾದೀ ದೇಶಗಳ ಹಾಗೂ ಜಾಗತಿಕ ಕಮ್ಯುನಿಸ್ಟ್ ಚಳವಳಿಯ ತಿಕ್ಕಾಟ ಹಾಗೂ ಅನೈಕ್ಯತೆಯಿಂದಾಗಿ ಬಿಕ್ಕಟ್ಟಿಗೆ ಸಿಲುಕಿಕೊಂಡಿರುವ ಬಂಡವಾಳಶಾಹೀ ಹಾಗೂ ಸಾಮ್ರಾಜ್ಯಶಾಹೀ ಇನ್ನೂ ಉಸಿರು ಹಿಡಿದುಕೊಳ್ಳಲು ಶಕ್ತವಾಗಿದೆ. ಜಾಗತಿಕ ಶಾಂತಿಗಾಗಿ ಹೋರಾಟ ಮತ್ತು ಅದರ ಯಶಸ್ಸು ಜಾಗತಿಕ ಸಮಾಜವಾದಿ ದೇಶಗಳು ಹಾಗೂ ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳವಳಿಯ ಐಕ್ಯತೆ ಮರುಸ್ಥಾಪನೆಗಾಗಿ ಹೋರಾಟ ಮತ್ತು ಒಗ್ಗೂಡಿಸಬಹುದಾದ ಎಲ್ಲಾ ಶಾಂತಿಪ್ರಿಯ ಹಾಗೂ ಸಾಮ್ರಾಜ್ಯಶಾಹೀ ವಿರೋಧೀ ಶಕ್ತಿಗಳ ಐಕ್ಯತೆಗಾಗಿ ಹೋರಾಟ ಇವುಗಳ ಮೇಲೆ ಬಹಳಷ್ಟು ಅವಲಂಬಿಸಿದೆ.

ಸಶಸ್ತ್ರ ತಿಕ್ಕಾಟಗಳು

ಕಳೆದ ಎರಡು ದಶಕಗಳಲ್ಲಿ ಒಂದು ಕಡೆ ಸಮಾಜವಾದ, ಕಮ್ಯುನಿಸಂ ಮತ್ತು ಶಾಂತಿಯ ಜಾಗತಿಕ ಶಕ್ತಿಗಳು ಅತಿ ದೊಡ್ಡ ಪ್ರಮಾಣದಲ್ಲಿ ಬೆಳೆದಿವೆ. ಆದರೆ ಇನ್ನೊಂದೆಡೆ ತೀವ್ರ ಭಿನ್ನಾಭಿಪ್ರಾಯಗಳು, ಒಡಕುಗಳು ಸಹ ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ ತಲೆದೋರಿವೆ. ಇವು ಇನ್ನೂ ಮುಂದುವರಿದು 1969ರಲ್ಲಿ ಚೀನಾ-ಸೋವಿಯೆಟ್ ಗಡಿಯಲ್ಲಿ ಸಶಸ್ತ್ರ ತಿಕ್ಕಾಟಗಳು ಮತ್ತು ಚೀನಾ ಮತ್ತು ವಿಯಟ್‌ನಾಮ್‌ಗಳ ಮಧ್ಯೆ ಮೂರು ವಾರಗಳ ಪೂರ್ಣಪ್ರಮಾಣದ ಯುದ್ಧ ಇವುಗಳಲ್ಲಿ ಪರ್ಯವಸಾನಗೊಂಡಿವೆ. ಚೀನಾ-ಸೋವಿಯೆಟ್ ಮತ್ತು ಚೀನಾ-ವಿಯೆಟ್‌ನಾಮ್ ಗಡಿಗಳಲ್ಲಿ ಇನ್ನೂ ಸಶಸ್ತ್ರ ಪಡೆಗಳು ಎದುರುಬದುರಾಗಿ ಸನ್ನದ್ಧವಾಗಿವೆ. ಹಿಂದೆ ಈ ರೀತಿಯ ಪ್ರಸಂಗ ಬರಬಹುದೆಂಬುದು ಊಹೆಗೂ ನಿಲುಕದ್ದಾಗಿತ್ತು. ಆದರೆ ಅಷ್ಟು ಮಾತ್ರಕ್ಕೆ ಈ ವಾಸ್ತವಿಕತೆಯನ್ನು ಆಗಬಾರದಿತ್ತು ಎಂದು ಹಾರೈಸುವುದಾಗಲಿ, ಅಥವಾ ವಿಧಿ ಎಂದು ಇದನ್ನು ಒಪ್ಪಿಕೊಂಡು ಸುಮ್ಮನಿರುವುದಾಗಲಿ ಸಾಧ್ಯವಿಲ್ಲ ಜಗತ್ತಿನ ಎಲ್ಲಾ ಕಾರ್ಮಿಕ ಮತ್ತು ಕಮ್ಯುನಿಸ್ಟ್ ಪಕ್ಷಗಳು ಸಮಾಜವಾದಿ ದೇಶಗಳು ಮತ್ತು ಸರ್ಕಾರಗಳು, ಅದರಲ್ಲೂ ಈ ತಿಕ್ಕಾಟದಲ್ಲಿ ಸಿಲುಕಿರುವವು ವಿಶೇಷವಾಗಿ ಎರಡು ಸಮಾಜವಾದಿ ದೇಶಗಳ ಮತ್ತು ಅವುಗಳ ಆಳುವ ಕಮ್ಯುನಿಸ್ಟ್ ಪಕ್ಷಗಳ ಮಧ್ಯೆ ಇರುವ ವಿವಾದಗಳನ್ನು ಯಾವುದೇ ಘರ್ಷಣೆಗೆ ಅವಕಾಶ ಕೊಡದಂತೆ ಅನ್ಯೋನ್ಯವಾಗಿ ಪರಿಹರಿಸುವ ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕು.

ಈ ರೀತಿಯ ಪರಿಹಾರ ಯಾವುದೇ ಕಾರಣದಿಂದ ವಿಳಂಬವಾದರೆ, ಕನಿಷ್ಟ ಪಕ್ಷ ತಿಕ್ಕಾಟಗಳನ್ನು ಮತ್ತು ವೈಷಮ್ಯಗಳನ್ನು ಆದಷ್ಟು ನಿಯಂತ್ರಿಸಲು ಎಲ್ಲಾ ಪ್ರಯತ್ನಗಳೂ ನಡೆಯಬೇಕು. ಇದರ ಬದಲು ಇದರಲ್ಲಿ ಭಾಗಿಯಾಗಿರುವ ಎರಡೂ ಪಕ್ಷಗಳು ತನ್ನ ನಿಲುವು ನೂರಕ್ಕೆ ನೂರು ಸರಿ, ಇದಿರು ಪಕ್ಷದ ನಿಲುವು ನೂರಕ್ಕೆ ನೂರು ತಪ್ಪು ಎಂದು ಸಮರ್ಥಿಸಿಕೊಳ್ಳುವುದು ಈ ತಿಕ್ಕಾಟ, ವೈಷಮ್ಯಗಳನ್ನು ಇನ್ನೂ ಹೆಚ್ಚು ಮಾಡಲು ಸಹಾಯಕವಾಗುತ್ತದೆ ಅಷ್ಟೆ. ಇಂತಹ ತಿಕ್ಕಾಟಗಳಿಗೆ ಯಾವ ಪಕ್ಷ ಎಷ್ಟು ಜವಾಬ್ದಾರಿ ಎಂದು ಶೇಕಡಾವಾರು ಲೆಕ್ಕ ಹಾಕುವುದರಿಂದ, ಇದರ ಪರಿಹಾರಕ್ಕಂತೂ ಏನೂ ಸಹಾಯಕವಾಗುವುದಿಲ್ಲ. ಇದು ವಿವಾದಗಳ ಸಮಂಜಾಯಿಷಿಗೆ ಮಾತುಕತೆ ನಡೆಸಲು ಸೂಕ್ತ ವಾತಾವರಣ ನಿರ್ಮಿಸುವುದಕ್ಕೂ ಸಹಾಯಕವಾಗುವುದಿಲ್ಲ.

ಚೀನಾ ಮತ್ತು ರಷ್ಯಾ ಪಕ್ಷಗಳ ಮತ್ತು ಪ್ರಭುತ್ವಗಳ ನಡುವಣ ವಿರಸ ಮತ್ತು ವೈಷಮ್ಯದ ಪೂರ್ಣ 20 ವರ್ಷಗಳು ಎರಡು ದೊಡ್ಡ ಸಮಾಜವಾದಿ ಪ್ರಭುತ್ವಗಳ ನಡುವಣ ಇಂತಹ ಸಂಬಂಧದ ವಿಫಲತೆಯನ್ನು ಸ್ಪಷ್ಟವಾಗಿ ಎತ್ತಿತೋರಿಸುತ್ತದೆ. ಕೊಳೆತು ನಾರುತ್ತಿರುವ, ನಿಧಾನವಾಗಿ ಸಾಯುತ್ತಿರುವ ಜಾಗತಿಕ ಬಂಡವಾಳಶಾಹಿಗೆ ಈ ವೈಷಮ್ಯಪೂರ್ಣ ಸಂಬಂಧಗಳಿಂದಾಗಿ ಹೊಸ ಜೀವಬಂದಂತಾಗಿದೆ. ಚೀನಾ-ಸೋವಿಯೆಟ್ ವೈಷಮ್ಯದ ಕಹಿ ಜಾಗತಿಕ ಕಮ್ಯುನಿಸ್ಟ್ ಚಳುವಳಿಯಲ್ಲಿ ಹತಾಶೆ, ಸಂಕಟಗಳಿಗೆ ಕಾರಣವಾಗಿದ್ದರೆ, ಇತ್ತೀಚಿನ ಚೀನ-ವಿಯೆಟ್‌ನಾಮ್ ಯುದ್ಧ ಜಾಗತಿಕ ಚಳುವಳಿಯ ಸಮಸ್ಯೆಗಳನ್ನು ಇನ್ನಷ್ಟು ಸಂಕೀರ್ಣಗೊಳಿಸಿದೆ. ಅಷ್ಟೇ ಅಲ್ಲ ಇಂತಹ ಪರಿಸ್ಥಿತಿಯಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳು ಒಡಂಬಡಿಕೆಯ (detente)ನ್ನು ಮುರಿಯಲು, ಶೀತಲ ಸಮರ ಪುನಃ ಆರಂಭಿಸಲು, ಹೊಸ ಶಸ್ತ್ರಾಸ್ತ್ರ ಸ್ಪರ್ಧೆ ಪ್ರಚೋದಿಸಲು, ಮತ್ತು ಜಾಗತಿಕ ಅಣು ಸಮರದ ಅಪಾಯ ಹೆಚ್ಚಿಸಲು ಧೈರ್ಯವಹಿಸುವಂತೆ ಆಗಿದೆ. ಈ ರೀತಿಯಲ್ಲಿ ಜಾಗತಿಕ ಪರಿಸ್ಥಿತಿ, ಪ್ರಮುಖವಾಗಿ ರಷ್ಯಾ ಸೇರಿದಂತೆ ಜಾಗತಿಕ ಸಮಾಜವಾದಿ ದೇಶಗಳ ಆರ್ಥಿಕ, ರಾಜಕೀಯ ಮತ್ತು ಮಿಲಿಟರಿ ಶಕ್ತಿ ಅಗಾಧವಾಗಿ ಬೆಳೆದಿರುವ ಸಂತಸದ ಸೂಚನೆ ಇದ್ದಾಗ್ಯೂ ಭೀಕರವಾಗಿದೆ.

26ನೇ ಅಧಿವೇಶನಕ್ಕೆ ಕೇಂದ್ರ ಸಮಿತಿಯ ವರದಿ ಅಮೇರಿಕನ್ ಸಾಮ್ರಾಜ್ಯಶಾಹಿ ಶಕ್ತಿಗಳಿಂದ ಜಾಗತಿಕ ಶಾಂತಿಗಿರುವ ಅಪಾಯವನ್ನು ಸರಿಯಾಗಿಯೇ ಒತ್ತಿ ಹೇಳಿದ್ದರೂ, ಜಗತ್ತಿನ ಸಮಾಜವಾದಿ ಸಮುದಾಯ, ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿ ಮತ್ತು ತನ್ನನ್ನೇ ಆಗಲಿ ಜಾಗತಿಕ ಚಳುವಳಿಯ ಒಡಕು ಮತ್ತು ವಿರಸದ ಗಹನತೆಯ ಬಗ್ಗೆ ಎಚ್ಚರಿಸುವ ಗೋಜಿಗೆಹೋಗಿಲ್ಲ. ಅಮೇರಿಕ, ಜಪಾನು ಮತ್ತು ಇತರ ನಾಟೋ ದೇಶಗಳು ಚೀನ-ಸೋವಿಯೆಟ್ ವೈಷಮ್ಯವನ್ನು ಉಪಯೋಗಿಸಲು ಪ್ರಯತ್ನವನ್ನು ವರದಿ, 'ಅಪಾಯಕಾರಿ ಆಟ' ಎಂದು ವರ್ಣಿಸಿ "ಸಾಮ್ರಾಜ್ಯಶಾಹಿಗಳು ಎಂದೂ ಸಮಾಜವಾದದ ಸ್ನೇಹಿತರಾಗುವುದಿಲ್ಲ" ಎಂದು ಸೂಕ್ತವಾಗಿಯೇ ಎಚ್ಚರಿಸಿದೆ.

ಚೀನಾದೊಂದಿಗೆ ಸಂಬಂಧಗಳು

ಚೀನಾದ ಬಗ್ಗೆ ವರದಿಯಲ್ಲಿ ಇರುವ ಸುಮಾರು ಆರು ಪ್ಯಾರಾಗಳು ಚೀನಾದೊಂದಿಗೆ ವ್ಯವಹಾರದಲ್ಲಿ ರಷ್ಯಾ ಅನುಸರಿಸುತ್ತಿರುವ 'ಏಟಿಗೆ ಎದುರೇಟಿ'ನ ಹಳೆ ನಿಲುವೇ ಮುಂದುವರಿದಿರುವ ಸೂಚನೆ ನೀಡುತ್ತವೆ. "ಸದ್ಯಕ್ಕೆ ಚೀನಾದ ಆಂತರಿಕ ಧೋರಣೆಯಲ್ಲಿ ಬದಲಾವಣೆಗಳು ಆಗುತ್ತಿವೆ. ಇವುಗಳ ಮಹತ್ವವೇನು ಎಂದು ಸಮಯವೇ ಹೇಳಬೇಕು. ಮಾವೋ ಸಂಪ್ರದಾಯವನ್ನು ಎಷ್ಟರ ಮಟ್ಟಿಗೆ ಈ ಧೋರಣೆಗಳು ಮೀರಿ ನಿಲ್ಲುತ್ತವೆ ಎಂಬುದನ್ನು ಸಹ ಸಮಯವೇ ಹೇಳಬಲ್ಲುದು. ಆದರೆ ಇನ್ನೂ ಪೀಕಿಂಗ್‌ನ ವಿದೇಶಿ ಧೋರಣೆಗಳಲ್ಲಿ ಸರಿಯಾದ ಹಾದಿಯಲ್ಲಿ ಬದಲಾವಣೆಗಳ ಬಗ್ಗೆ ಮಾತನಾಡಲು ಇನ್ನೂ ದುರದೃಷ್ಟವಶಾತ್ ಯಾವ ಆಧಾರಗಳೂ ಇಲ್ಲ" ಎಂಬ ಉದ್ಗಾರವೊಂದೇ ವರದಿಯಲ್ಲಿ ಬೇರೆಯಾಗಿ ನಿಲ್ಲುತ್ತದೆ.

ಚೀನಾ-ರಷ್ಯಾ ವಿವಾದ, ಭಿನ್ನಾಭಿಪ್ರಾಯಗಳ ಚರಿತ್ರೆ ಹೇಳುವುದಾಗಲಿ, ಅದರ ಬಗ್ಗೆ ಅಭಿಪ್ರಾಯ ತಿಳಿಸುವುದಾಗಲಿ ಇಲ್ಲಿ ನಮ್ಮ ಉದ್ದೇಶವಲ್ಲ. ಇಂತಹ ಒಂದು ಪ್ರಯತ್ನ, ಈಗಿನ ಅಂತರಾಷ್ಟ್ರೀಯ ಪರಿಸ್ಥಿತಿಯಲ್ಲಿ ಅತಿ ಅಗತ್ಯವಾಗಿರುವ ಕಮ್ಯುನಿಸ್ಟ್ ಏಕತೆಗೆ ಅಡ್ಡಿ ಮಾಡಬಹುದು. ಸೋವಿಯೆಟ್ ಪ್ರಭುತ್ವದ ಸ್ವರೂಪದ ಚೀನೀ ವಿವರಣೆ ಮತ್ತು ನಾಟೊ ದೇಶಗಳೊಂದಿಗೆ ಚೀನಾದ ಸಂಬಂಧಗಳ ಬಗ್ಗೆ ನಮ್ಮ ನಿಲುವು ಎಲ್ಲರಿಗೂ ತಿಳಿದದ್ದೇ ಆಗಿದೆ. ಇವೆರಡನ್ನೂ ನಾವು ವಿರೋಧಿಸುತ್ತೇವೆ. ಆದರೆ, ಅಮೇರಿಕನ್ ಸಾಮ್ರಾಜ್ಯಶಾಹಿ ಯುದ್ಧ ಘೋಷಣೆಗಳನ್ನು ಹಾಕುತ್ತಿರುವಾಗ, ಅದರಲ್ಲೂ ಎರಡು ದೊಡ್ಡ ಸಮಾಜವಾದಿ ದೇಶಗಳ ನಡುವಣ ಒಡಕೇ ಅವರಿಗೆ ಮುಖ್ಯ ಕುಮ್ಮಕ್ಕು ಆಗಿರುವಾಗ, ತೀರಾ ತುರ್ತಿನ ಅವಶ್ಯಕತೆಯಾದ ರಷ್ಯಾ-ಚೀನಾ ಸಂಬಂಧಗಳನ್ನು ಸುಧಾರಿಸುವ ಘೋಷಣೆಯನ್ನು ಈ ವರದಿ ನೀಡಿಲ್ಲ ಎಂಬುದು ನಮ್ಮ ಮುಖ್ಯ ಆಕ್ಷೇಪಣೆ. "ಪಕ್ಷದ 24ನೇ ಮತ್ತು 25ನೇ ಅಧಿವೇಶನದ ಸಲಹೆಗಳನ್ನು ನಾವು ಮುಂದುವರಿಸುತ್ತೇವೆ" ಮತ್ತು "ಚೀನಾದೊಂದಿಗೆ ಸಂಬಂಧ ಸುಧಾರಿಸುವ ಬಗ್ಗೆ ನಮ್ಮ ಸೂಚನೆ ಸದಾ ತೆರೆದೇ ಇದೆ" ಎನ್ನುವಷ್ಟಕ್ಕೆ ವರದಿ ಸೀಮಿತವಾಗಿದೆ.

24ನೇ ಅಧಿವೇಶನ 10 ವರ್ಷಗಳ ಹಿಂದೆ ಮತ್ತು 25ನೇ ಅಧಿವೇಶನ 5 ವರ್ಷಗಳ ಹಿಂದೆ ನಡೆದಿತ್ತು. ಅದರ ನಂತರ ಬಹಳಷ್ಟು ಹೊಸ ಬೆಳವಣಿಗೆಗಳಾಗಿವೆ. ಚೀನಾದಲ್ಲಿ ಸಾಂಸ್ಕೃತಿಕ ಕ್ರಾಂತಿಯ ನಂತರ ಒಂದು ದಶಕದಲ್ಲಿ ಬೇರೂರಿದ್ದ ಅತಿ – ಎಡವಾದಿ ಮತ್ತು ದುಸ್ಸಾಹಸವಾದಿ ಧೋರಣೆಯನ್ನು ಕಿತ್ತೊಗೆಯಲು ಪಕ್ಷದಲ್ಲಿ ಒಂದು ದೊಡ್ಡ ಆಂತರಿಕ ಸಂಘರ್ಷ ನಡೆಯುತ್ತಿದೆ. 24ನೇ ಅಧಿವೇಶನದಲ್ಲಿ ಮಂಡಿಸಿದ ಕೆಲವು ಪ್ರಮುಖ ಮತ್ತು ಸೂಕ್ತವಾದ ಹೇಳಿಕೆಗಳನ್ನು ಪುನಃ ಹೇಳುವುದು, ಒತ್ತಿ ಹೇಳುವುದು ಅತ್ಯಂತ ಸಮಕಾಲೀನ ಅವಶ್ಯಕತೆ ಎಂದು ನಮ್ಮ ಅಭಿಪ್ರಾಯ. "ಚೀನಾ ಮತ್ತು ರಷ್ಯಾದ ನಡುವೆ ವಿರಸ ಉಂಟುಮಾಡುವುದು ಅದರಲ್ಲೂ ಸಾಮ್ರಾಜ್ಯಶಾಹಿಗಳು ಸ್ವಾತಂತ್ರ್ಯಪ್ರಿಯ ಜನರನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿರುವಾಗ, ತೀರಾ ಅನರ್ಥಕಾರಿ ಮತ್ತು ಅಪಾಯಕಾರಿ" ಮತ್ತು "ನಾವು ಚೀನಾ ಮತ್ತು ರಷ್ಯಾಗಳ ಸಂಬಂಧ ಸಾಮಾನ್ಯೀಕರಿಸುವುದು ಮಾತ್ರವಲ್ಲದೆ ನೆರೆಹೊರೆಯ ಬಾಂಧವ್ಯ ಮತ್ತು ಗೆಳೆತನ ಪುನಃ ಸ್ಥಾಪಿಸಲು ಎಲ್ಲಾ ಪ್ರಯತ್ನಗಳನ್ನು ನಡೆಸಲು ಸಿದ್ಧರಿದ್ದೇವೆ. ಇದನ್ನು ಕ್ರಮೇಣ ಸಾಧಿಸುತ್ತೇವೆ ಎಂದು ಭರವಸೆ ಸಹ ನಮಗಿದೆ". ಇವೇ 24ನೇ ಅಧಿವೇಶನದ ಅಂತಹ ಸೂಕ್ತ ಕೆಲವು ಮಾತುಗಳು.

10 ವರ್ಷಗಳ ಹಿಂದೆ, ಈರೀತಿ ಚೀನಾ-ರಷ್ಯಾ ಒಳ್ಳೆ ಸಂಬಂಧಗಳ ಪುನಃಸ್ಥಾಪನೆ ಬಗ್ಗೆ ಭರವಸೆ ವ್ಯಕ್ತಪಡಿಸಿರುವಾಗ, 26ನೇ ಅಧಿವೇಶನದ ಮೇಲೆ ಉದ್ಧರಿಸಿದ ಮಾತುಗಳು ತೀರಾ ಕಠಿಣ, ಅಸಾಮಯಿಕ ಅನ್ನಿಸುತ್ತವೆ. ಆದರೆ ನಾವು ಕೂಡಲೇ ಚೀನಾ-ರಷ್ಯಾ ವೈಷಮ್ಯ ನಿವಾರಣೆಯಾಗುತ್ತದೆ ಅಥವಾ ಚೀನಾ-ರಷ್ಯಾ ಏಕತೆ ಇನ್ನೇನು ಸನ್ನದಲ್ಲೇ ಸಾಧಿಸಲ್ಪಡುತ್ತದೆ ಎಂಬ ಯಾವುದೇ ಭ್ರಮೆ ಇಟ್ಟುಕೊಂಡಿಲ್ಲ. ಯಾವುದೇ ಸರಿಯಾದ ನಿಲುವುಗಳನ್ನು ಬಿಟ್ಟುಕೊಡದೆ, ಎರಡು ದೊಡ್ಡ ಸಮಾಜವಾದಿ ದೇಶಗಳ ಏಕತೆಗೆ ಸತತ ಹೋರಾಟ ನಡೆಸುವುದು ಎಲ್ಲಾ ಕಮ್ಯುನಿಸ್ಟರ ಅದರಲ್ಲೂ ರಷ್ಯಾ ಮತ್ತು ಚೀನಾದ ಕಮ್ಯುನಿಸ್ಟರ ಕರ್ತವ್ಯ ಎಂದು ನಾವು ಭಾವಿಸುತ್ತೇವೆ. ಇದಲ್ಲದೆ ಬೇರೆ ಯಾವ ದಾರಿಯೂ ಇಲ್ಲ. ಈ ವೈಷಮ್ಯ, ಒಡಕು ಮುಂದುವರಿಯುವುದು ಸಾಮ್ರಾಜ್ಯಶಾಹಿಗಳಿಗೆ ಮಾತ್ರ ಸಹಾಯಕವಾಗುವಂಥಾದ್ದು.

ಜಾಗತಿಕ ಚಳುವಳಿ

ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗೆ ಬಗ್ಗೆ ಹೇಳುತ್ತಾ ವರದಿ, ಜಗತ್ತಿನಲ್ಲಿ ಈಗ 94 ಸಕ್ರಿಯ ಕಮ್ಯುನಿಸ್ಟ್ ಪಕ್ಷಗಳಿದ್ದು ಅಸಂಖ್ಯ ಹೋರಾಟಗಾರರು ಈ ಪಕ್ಷಗಳನ್ನು ದಿನೇದಿನೇ ಸೇರುತ್ತಿದ್ದಾರೆ ಎಂದಿದೆ. "ಕಮ್ಯುನಿಸ್ಟ್ ಪಕ್ಷಗಳ ಪ್ರಭಾವ ಬೆಳೆದಂತೆ ಅವುಗಳ ಕರ್ತವ್ಯ ಹೆಚ್ಚು ಹೆಚ್ಚು ಸಂಕೀರ್ಣ ಮತ್ತು ಬಹುಸ್ವರೂಪಿಯಾಗುತ್ತಿದೆ. ಇದರಿಂದಾಗಿ ಕೆಲವು ಬಾರಿ ವರ್ಗಸಂಘರ್ಷದ ಕೆಲವು ವಿಷಯಗಳಿಗೆ ಸಂಬಂಧಪಟ್ಟಂತೆ ಭಿನ್ನಾಭಿಪ್ರಾಯಗಳು ತಲೆದೋರುತ್ತಿದ್ದು, ಇದು ಪಕ್ಷಗಳ ಮಧ್ಯೆ ಚರ್ಚಾಸ್ಪದ ವಿಷಯವಾಗಿದೆ.

ನಮಗನಿಸುವಂತೆ ಇದು ತೀರಾ ಸ್ವಾಭಾವಿಕ. ಕೆಲವು ವಿಷಯಗಳ ಬಗ್ಗೆ ಹಿಂದೆನೂ ಕೆಲವು ಪಕ್ಷಗಳ ನಡುವೆ ಭಿನ್ನಾಭಿಪ್ರಾಯಗಳಿದ್ದವು. ಈ ಭಿನ್ನಾಭಿಪ್ರಾಯಗಳಿದ್ದಾಗ್ಯೂ ರಾಜಕೀಯವಾಗಿ ಸಹಕರಿಸಿ ವರ್ಗಶತ್ರುವಿನ ವಿರುದ್ಧ ಹೋರಾಡುವುದು ಸಾಧ್ಯ ಮತ್ತು ಅವಶ್ಯಕ ಎಂದು ಸ್ಪಷ್ಟವಾಗಿ ಹಿಂದಿನ ಅನುಭವಗಳಿಂದ ಸಿದ್ಧವಾಗಿದೆ".

ಪ್ರಸಕ್ತ ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿರುವ ಭಿನ್ನಾಭಿಪ್ರಾಯಗಳು ಮತ್ತು ಒಡಕುಗಳ ಬಗ್ಗೆ ಈ ಮಾತು, ತೀರಾ ಮೃದುವಾಗಿ ಹೇಳಬೇಕೆಂದರೂ, ಅತ್ಯಂತ ಸರಳೀಕೃತ ಎಂದು ಹೇಳದೆ ವಿಧಿಯಿಲ್ಲ. ಕಳೆದ 20 ವರ್ಷಗಳಲ್ಲಿ ಚಳುವಳಿಯಲ್ಲಿ ಬಂದಿರುವ ಭಿನ್ನಾಭಿಪ್ರಾಯಗಳು ಮತ್ತು ಒಡಕುಗಳಿಗೂ 1920–1960ರ ನಾಲ್ಕು ದಶಕಗಳ ಪರಿಸ್ಥಿತಿಗೂ ಅಜಗಜಾಂತರ.

ಈ ವ್ಯತ್ಯಾಸಗಳು ಚಳುವಳಿಯ ಅಗಾಧ ಬೆಳವಣಿಗೆ ಮತ್ತು ವಿವಿಧ ಕಮ್ಯುನಿಸ್ಟ್ ಪಕ್ಷಗಳು ಕೆಲಸ ಮಾಡುತ್ತಿರುವ ವಿಶಿಷ್ಟ ಪರಿಸ್ಥಿತಿಗಳ ಫಲವಾದರೂ, ಇದನ್ನು "ಸಂಪೂರ್ಣವಾಗಿ ಸ್ವಾಭಾವಿಕ" ಎನ್ನುವುದಾಗಲಿ ಅಥವಾ ನಿರಾಳವಾಗಿ ಸಮಸ್ಯೆಗಳಿದ್ದಾಗ್ಯೂ ವರ್ಗಶತ್ರುವಿನ ವಿರುದ್ಧ ಹೋರಾಡಬೇಕು" ಎಂದು ತೇಲಿಸಿಬಿಡುವುದಾಗಲಿ ಸಾಧ್ಯವಿಲ್ಲದ ವಾಸ್ತವಿಕತೆ ಇಂದಿನದು. ಇಂದಿನ ಚಳುವಳಿಯಲ್ಲಿನ ಭಿನ್ನಾಭಿಪ್ರಾಯಗಳು, ಒಡಕುಗಳು ಹಿಂದೆಂದಿಗಿಂತಲೂ ಹೆಚ್ಚು ಗಂಭೀರ ಸ್ವರೂಪದ್ದು, ಇವುಗಳ ಕಾರಣಗಳೂ ವಿವಿಧ ಮತ್ತು ಬಹುಸ್ವರೂಪಿಯಾಗಿವೆ. ಆದ್ದರಿಂದಾಗಿ ಇದಕ್ಕೆ ಪರಿಹಾರವಾಗಬಹುದಾದ ಕ್ರಮಗಳೂ, ಸಾಧನಗಳೂ ತುಂಬಾ ಸಂಕೀರ್ಣವಾಗಿದ್ದು, ಬಹಳಷ್ಟು ಎಡರುತೊಡರುಗಳಿಂದ ತುಂಬಿವೆ.

ಸಮಾಜವಾದಿ ದೇಶಗಳ ಆಳುವ ಕಮ್ಯುನಿಸ್ಟ್ ಪಕ್ಷಗಳ ನಡುವೆ ತೀವ್ರ ಭಿನ್ನಾಭಿಪ್ರಾಯ, ಒಡಕು, ಚಾರಿತ್ರಿಕವಾಗಿ ಹೊಸ ಬೆಳವಣಿಗೆ. ಆದ್ದರಿಂದ ಇವನ್ನು ಪರಿಹರಿಸುವ ಹೋರಾಟದ ವಿಧಾನಗಳನ್ನು ಚರಿತ್ರೆಯಿಂದ ಕಲಿಯುವುದು ಸಾಧ್ಯವಿಲ್ಲದ ಮಾತು. ಚೀನಾ-ರಷ್ಯಾ, ಚೀನಾ-ವಿಯೆಟ್‌ನಾಮ್, ರಷ್ಯಾ-ಅಲ್ಬೇನಿಯಾ, ಅಲ್ಬೇನಿಯಾ-ಚೀನಾ ವಿವಾದಗಳು, ಬರಿ ವಿವಾದಗಳಾಗಿ ಉಳಿದಿಲ್ಲ ಘರ್ಷಣೆಯ ಸ್ವರೂಪ ಪಡೆದಿವೆ. ಕೆಲವು ಭಿನ್ನಾಭಿಪ್ರಾಯಗಳ ಹಿಂದಿನ ಮೂಲ ಕಾರಣಗಳು ರಾಜಕೀಯ-ಸೈದ್ಧಾಂತಿಕ ಸ್ವರೂಪದ್ದು : ಬಲ ಅಥವಾ ಎಡ ಪಂಥೀಯ ಸಂದರ್ಭಸಾಧಕತನದ ತಪ್ಪುಗಳು. ಇಂತಹ ತಪ್ಪುಗಳನ್ನು, ಯಾವುದೇ ಸಮಾಜವಾದಿ ದೇಶ ಅಥವಾ ಪಕ್ಷದ ಮಧ್ಯಪ್ರವೇಶದಿಂದ; ಮೂರನೇ ಅಂತರಾಷ್ಟ್ರೀಯದ ದಿನಗಳಂತೆ ತಪ್ಪುಮಾಡುವ ಪಕ್ಷವನ್ನು ಶಿಸ್ತುಗೊಳಿಸುವುದರಿಂದ ಸರಿಪಡಿಸಲು ಸಾಧ್ಯವಿಲ್ಲ.

ಆಳುವ ಪಕ್ಷವಾಗಿರದ ಪಕ್ಷಗಳ ಮಧ್ಯೆ ಭಿನ್ನಾಭಿಪ್ರಾಯ ಸಹ ಇದೇ ಸ್ವರೂಪದ್ದು. ಆದರೆ ಒಂದೇ ಒಂದು ವ್ಯತ್ಯಾಸವೆಂದರೆ ಈ ಪಕ್ಷಗಳಿಗೆ ಭಿನ್ನಾಭಿಪ್ರಾಯವಿರುವ ಪಕ್ಷದ ವಿರುದ್ಧ ರಾಜಕೀಯ-ಸೈದ್ಧಾಂತಿಕ ಹೋರಾಟದಲ್ಲಿ ಪ್ರಭುತ್ವದ ಬಳಕೆ ಮಾಡಲು ಅವಕಾಶವಿಲ್ಲ.

ನೀತಿಯುತ ಹೋರಾಟ

ಮಾರ್ಕ್ಸ್‌ವಾದ-ಲೆನಿನ್‌ವಾದದ ಮೂಲಭೂತ ನೀತಿಗಳನ್ನು ಪ್ರಶ್ನಿಸುವ ಅಧಿಕೃತ ನಿಲುವು ಹೊಂದಿದ ಕಮ್ಯುನಿಸ್ಟ್ ಪಕ್ಷಗಳೂ ಇಂದು ಇವೆ. ಇವು ಲೆನಿನ್‌ವಾದ ಒಂದು ರಷ್ಯನ್ ಪ್ರತಿಕ್ರಿಯೆ ಎನ್ನುತ್ತವೆ. ವಿವಿಧ ಪಕ್ಷ

ಗಳ ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಒತ್ತಿಹೇಳಿ ಸಂರಕ್ಷಿಸುವುದು, ಇತರ ಪಕ್ಷಗಳಿಂದ ಅನಗತ್ಯ ಹಸ್ತಕ್ಷೇಪ ಮತ್ತು ನಿಲುವು ಹೇರಿಕೆಯನ್ನು ವಿರೋಧಿಸುವುದು ನೀತಿಬದ್ಧ ಮತ್ತು ಸೂಕ್ತವಾಗಿಯೇ ಇದೆ. ಆದರೆ ಕೆಲವು ಪಕ್ಷಗಳು ಈರೀತಿ ಮಾಡುವಾಗ ಕಾಯ್ದುಕೊಳ್ಳಬೇಕಾದ ಮಾರ್ಕ್ಸ್‌ವಾದ, ಕಾರ್ಮಿಕ ಅಂತರಾಷ್ಟ್ರೀಯತೆ ಮತ್ತು ಚಳುವಳಿಯ ಏಕತೆ ಮತ್ತು ಬಿಗಿ ಬಾಂಧವ್ಯದ ಬಗ್ಗೆ ಲಕ್ಷ್ಯತೋರಿಸದಿರುವುದು ಕಂಡುಬಂದಿದೆ. ಕೆಲವು ಪಕ್ಷಗಳು ಇನ್ನೂ ಎಡ ಮತ್ತು ಬಲ ಸಂದರ್ಭಸಾಧಕ ನಿಲುವು, ಕಾರ್ಯಗಳಲ್ಲಿ ತೊಡಗಿವೆ. ಆದರೂ ತಮ್ಮ ತಮ್ಮ ದೇಶಗಳಲ್ಲಿ ಈ ಪಕ್ಷಗಳು, ಹಲವು ಸಂದರ್ಭಗಳಲ್ಲಿ, ಕಾರ್ಮಿಕವರ್ಗದ ಅತ್ಯಂತ ಮುಂದುವರಿದ ವಿಭಾಗದ ತುಕಡಿಗಳೆಂದು ಸ್ವೀಕೃತವಾಗಿವೆ. ಅಂತರಾಷ್ಟ್ರೀಯ ಚಳುವಳಿಯ ಏಕತೆಗೆ ಭಂಗವಾಗದಂತೆ ಇಂತಹ ಪಕ್ಷಗಳ ವಿರುದ್ಧ ರಾಜಕೀಯ-ಸೈದ್ಧಾಂತಿಕ ಹೋರಾಟ ನಡೆಸುವುದು ಹೇಗೆ ಎಂದು ಇಂದಿನ ಕಮ್ಯುನಿಸ್ಟರ ಮುಂದಿರುವ ಯಕ್ಷ ಪ್ರಶ್ನೆ. ಮಾರ್ಕ್ಸ್ ಅಥವಾ ಲೆನಿನ್ ಅವರ ಸಮಯದಲ್ಲಿ ಇಂತಹ ಪ್ರಶ್ನೆ ಮುಂದಿಡುವುದಾಗಲಿ, ಚರ್ಚಿಸುವುದಾಗಲಿ ಅಪ್ರಸ್ತುತ ಮತ್ತು ಊಹೆಗೂ ಮೀರಿದ್ದಾಗಿತ್ತು. ಸುಧಾರಣಾವಾದ ಪರಿಷ್ಕರಣವಾದ ಎಡ ದುಸ್ಸಾಹವಾದಗಳೆಂದರೇನು? ಯಾವುದೇ ಪಕ್ಷ ಬಲ ಅಥವಾ ಎಡ ಪರಿಷ್ಕರಣವಾದ ಅನುಸರಿಸುತ್ತಿದೆ ಎಂದು ನಿರ್ಧರಿಸುವುದು ಹೇಗೆ ಮುಂತಾದ ಪ್ರಶ್ನೆಗಳನ್ನು ಸ್ವ-ವಿವೇಚನೆ ಮತ್ತು ಯುಕ್ತಾಯುಕ್ತ ಪರಿಜ್ಞಾನದಿಂದ ಮಾತ್ರ ಬಿಡಿಸಲು ಸಾಧ್ಯ.

ಎರಡನೆಯದಾಗಿ ಆಳುವ ಕಮ್ಯುನಿಸ್ಟ್ ಪಕ್ಷಗಳ ಎಡ, ಬಲ ಪರಿಷ್ಕರಣವಾದಿ ತಪ್ಪುಗಳ–ಕಳೆದ ಎರಡು ದಶಕಗಳ ಹೊಸ ಪ್ರಕ್ರಿಯೆ ಇದು-ವಿರುದ್ಧ ಹೋರಾಟ ಲೆನಿನ್ ಕಾಲದಲ್ಲಿ ನಡೆಸಿದಂತೆ ನಡೆಸುವುದು ಸಾಧ್ಯವಿಲ್ಲ. ಏಕೆಂದರೆ ಈ ತಪ್ಪುದಾರಿಗಳ ವಿರುದ್ಧ ಹೋರಾಟವನ್ನು, ಸಮಾಜವಾದಿ ದೇಶಗಳ ಏಕತೆ ಮತ್ತು ಅಲ್ಲಿ ಸಮಾಜವಾದಿ ಸಾಧನೆಗಳ ರಕ್ಷಣೆಯ ಹೋರಾಟದೊಂದಿಗೆ ನಡೆಸಬೇಕಾದ ಪರಿಸ್ಥಿತಿ ಇಂದಿನದು.

ಮೂರನೇಯದಾಗಿ ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಕಳೆದ 30–35 ವರ್ಷಗಳ ಬೆಳವಣಿಗೆಯಲ್ಲಾಗಿರುವ ದೊಡ್ಡ ಬದಲಾವಣೆಗಳಿಂದಾಗಿ ಹಲವು ಪ್ರಶ್ನೆಗಳ ಬಗ್ಗೆ ಪುನಃ ವಿಚಾರ ಮಾಡಬೇಕಾಗಿದೆ. ಹಲವು ದೇಶಗಳು ಸಮಾಜವಾದಿ ದೇಶಗಳಾಗಿರುವುದು, ಹಲವು ವರ್ಷಗಳ (35 ರಿಂದ 64 ವರ್ಷಗಳು) ಕಾಲ ಪ್ರತ್ಯೇಕವಾಗಿ ಈ ದೇಶಗಳಲ್ಲಿ ಸಮಾಜವಾದಿ ಸಂರಚನೆಯ ನಿರ್ಮಾಣ, ಅಭಿವೃದ್ಧ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಗಳು ಹಾಗೇ ಮುಂದುವರಿಯುತ್ತಿರುವುದು, ಜಾಗತಿಕ ಕಾರ್ಮಿಕ ಕ್ರಾಂತಿಯ ವಿಜಯದಲ್ಲಾಗಿರುವ ವಿಳಂಬ ಇವೆಲ್ಲ ಸಂಕೀರ್ಣ ಸಮಸ್ಯೆಗಳಿಗೆ ಎಡೆಕೊಟ್ಟಿವೆ.

ಐಕ್ಯತೆ ಮತ್ತು ಐಕಮತ್ಯ

ಜಾಗತಿಕ ಕಮ್ಯುನಿಸ್ಟ್ ಚಳುವಳಿ, ಕೇಂದ್ರೀಕೃತ ಜಾಗತಿಕ ಕಾರ್ಮಿಕ ಸಂಘಟನೆಯ ಕೆಳಗೆ ಕೆಲಸಮಾಡುವ ಹಂತವನ್ನು ಮೀರಿ ಬೆಳೆದಿದೆ. ಆದರೂ ಎಲ್ಲಾ ಕಮ್ಯುನಿಸ್ಟ್ ಪಕ್ಷಗಳ ಸಾಮರಸ್ಯ, ಐಕ್ಯತೆ, ಭ್ರಾತೃತ್ವ ಮತ್ತು ಐಕಮತ್ಯವಿಲ್ಲದೆ ಅಂತರಾಷ್ಟ್ರೀಯ ಕಾರ್ಮಿಕ ಕ್ರಾಂತಿಕಾರಿ ಚಳುವಳಿ ತನ್ನ ಅಂತಿಮ ವಿಜಯ ಸಾಧಿಸಲಾರದು. ಈ ವಿಷಯದಲ್ಲಿ ದೊಡ್ಡ ಸಮಾಜವಾದಿ ದೇಶಗಳು ಮತ್ತು ದೊಡ್ಡ ಕಮ್ಯುನಿಸ್ಟ್ ದೇಶಗಳು ದೊಡ್ಡ ಜವಾಬ್ದಾರಿಯನ್ನು ಹೊರಬೇಕಾಗಿದೆ. ಪಕ್ಷಗಳ ನ್ಯಾಯಯುತವಾದ ಮತ್ತು ಔಪಚಾರಿಕ ಏಕತೆ ಮತ್ತು ಈ ಜವಾಬ್ದಾರಿ ಪರಸ್ಪರ ವಿರುದ್ಧವಾಗಿಲ್ಲ. ರಷ್ಯಾ ಮತ್ತು ಸೋವಿಯೆಟ್ ಯೂನಿಯನ್ನಿನ ಕಮ್ಯುನಿಸ್ಟ್ ಪಕ್ಷ ಜೀವನ ಮತ್ತು ಚರಿತ್ರೆಯಿಂದ, ಲೆನಿನ್ ಹೇಳಿದಂತೆ "ಜಾಗತಿಕ ಕ್ರಾಂತಿಯ ಮೂಲಕಣ"ವಾಗಲು ನಿಯಮಿಸಲ್ಪಟ್ಟಿದೆ. ಆದರೆ ಇಂತಹ ವಿಶಿಷ್ಟ ಪರಿಸ್ಥಿತಿ ಇದೆ ಎಂದ ಮಾತ್ರಕ್ಕೆ, ಅದು ತಪ್ಪುಮಾಡಲು ಸಾಧ್ಯವಿಲ್ಲ ಎಂದಾಗಲಿ, ಅಥವಾ ಅದನ್ನು ತಿದ್ದಿಕೊಳ್ಳುವುದಿಲ್ಲವೆಂದಾಗಲಿ ಎಂದು ಹೇಳಲು ಸಾಧ್ಯವಿಲ್ಲ. ಇದು ಜಗತ್ತಿನ ಕಮ್ಯುನಿಸ್ಟ್ ಪಕ್ಷಗಳ ಜತೆ ಸಮಾನ ಸದಸ್ಯನಾಗಿ, ಯಾವುದೇ ವಿಶೇಷ ಹಕ್ಕು, ವಿನಾಯತಿಗಳನ್ನು ಪಡೆಯದೆ ಅಧಿಕ ಜವಾಬ್ದಾರಿಹೊತ್ತು ಚಳುವಳಿಯನ್ನು ನಡೆಸಬೇಕಾಗಿದೆ. ಆಳುವ ಮತ್ತು ಆಳ್ವಿಕೆ ನಡೆಸದ ದೊಡ್ಡ ಪಕ್ಷಗಳು, ಸಣ್ಣ ಮತ್ತು ಬಲಹೀನ ಕಮ್ಯುನಿಸ್ಟ್ ಪಕ್ಷಗಳ ಬಗ್ಗೆ ದೊಡ್ಡಣ್ಣನ ಭಾವನೆ ತೋರದೆ, ಈ ಸಣ್ಣ ಪಕ್ಷಗಳನ್ನು ಸಣ್ಣ ದೇಶದ ಅಂಧಾಭಿಮಾನಕ್ಕೆ ಗುರಿಯಾಗದಂತೆ ನೋಡಿಕೊಳ್ಳಬೇಕಾಗಿದೆ. ಸಮಾಜವಾದಿ ಜಗತ್ತಿನ ಮತ್ತು ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯನ್ನು ರಕ್ಷಿಸಿ, ಬಲಪಡಿಸುವ ಕೆಲಸಕ್ಕೆ ಎಲ್ಲಾ ಕಮ್ಯುನಿಸ್ಟ್ ಶಕ್ತಿಗಳು ಅತ್ಯಧಿಕ ಪ್ರಾಮುಖ್ಯತೆ ನೀಡಬೇಕಾಗಿದೆ.

ಐಕ್ಯತೆ, ನೀತಿಯುತ ಐಕ್ಯತೆ; ಮಾರ್ಕ್ಸ್‌ವಾದ ಮತ್ತು ಜಾಗತಿಕ ಪ್ರಮಾಣದಲ್ಲಿ ಸಮಾಜವಾದ, ಕಮ್ಯುನಿಸಂ ಸ್ಥಾಪಿಸುವುದಕ್ಕೆ ನಿಷ್ಠವಾಗಿರುವ ಎಲ್ಲಾ ಕಮ್ಯುನಿಸ್ಟ್ ಪಕ್ಷಗಳ ಸೂತ್ರ ವಾಕ್ಯವಾಗಬೇಕಾಗಿದೆ.

(ಮುಗಿಯಿತು)

ಈ ಹೇಯ ಕೃತ್ಯ ನಿಲ್ಲಲಿ!

—ಜಿ. ವಿ. ಶ್ರೀರಾಂ ರೆಡ್ಡಿ

ಉತ್ತರ ಪ್ರದೇಶದ ಬಾಗಪತ್‌ನಲ್ಲಿ ಮಾಯಾತ್ಯಾಗಿಯ ಮೇಲೆ ಬಹಿರಂಗ ಅತ್ಯಾಚಾರ; ಮುರಾದಾಬಾದ್‌ನಲ್ಲಿ ಅಲ್ಪ ಸಂಖ್ಯಾತರ ನರಮೇಧ; ಬಿಹಾರ್‌ನ ಬಾಗಲ್ಪೂರನಲ್ಲಿ ಕೈದಿಗಳ ಕಣ್ಣು ಕೀಳುವುದು; ಸಮಸ್ತಿಪೂರ ಜೈಲಿನಲ್ಲಿ ಪೋಲೀಸರ ಹತ್ಯಾಕಾಂಡ; ಆಂಧ್ರ ಪ್ರದೇಶದಲ್ಲಿ ಊರಿಗೆ ನುಗ್ಗಿ ಸಾರ್ವಜನಿಕವಾಗಿ ಹೆಂಗಸರ ಮತ್ತು ಮಕ್ಕಳ ಮೇಲೆ ಪೋಲೀಸರು ಮತ್ತು ಜಮೀನ್ದಾರರ ಅತ್ಯಾಚಾರ; ದೆಹಲಿಯಲ್ಲಿ ಪ್ರತಿನಿತ್ಯ ಯುವತಿಯರ ಮಾನಭಂಗ; ಸಂಜೆಯಾದ ಮೇಲೆ ಹೆಣ್ಣುಮಕ್ಕಳು ಹೊರಗೆ ಕಾಲಿಡದ ಸ್ಥಿತಿ; ಗುಜರಾತ್‌ನಲ್ಲಿ ಪ್ರತಿದಿನ 2-3 ಜನರು ಪೋಲೀಸರ ಗುಂಡಿಗೆ ಆಹುತಿ; ಅಸ್ಸಾಂನಲ್ಲಿ ಅದೆಷ್ಟು ಜನ ಸತ್ತರು, ಸಾಯುತ್ತಿದ್ದಾರೆ ಲೆಕ್ಕವಿಲ್ಲ; ಕರ್ನಾಟಕದಲ್ಲಿ ಕಳೆದ ಜುಲೈ ತಿಂಗಳಿನಿಂದ ಇದುವರೆಗೆ 20 ಸಲ ಗೋಳಿಬಾರ್, ಪರಿಣಾಮವಾಗಿ ಸುಮಾರು 40 ಜನರ ಸಾವು: ಈ ಎಲ್ಲಾ ರಾಜ್ಯಗಳಲ್ಲಿ ಇಂದಿರಾಗಾಂಧೀಯವರ ಪಕ್ಷವೇ ಸರಕಾರ ನಡೆಸುತ್ತಿದೆ. ಆದರೆ ಈ ರಾಜ್ಯಗಳಲ್ಲಿ ಸರಕಾರ ಉರಳಿಸಲಿಲ್ಲ. ಯಾವದೇ ಪ್ರಕರಣದ ಬಗ್ಗೆ ವರದಿ ಕೇಳಲಿಲ್ಲ. ಆದರೆ ಪಶ್ಚಿಮ ಬಂಗಾಲದ ಘಟನೆಯ ಬಗ್ಗೆ ಇಂದಿರಾಗಾಂಧಿ ಮತ್ತು ಗೃಹ ಸಚಿವರು ತಕ್ಷಣ ವರದಿ ಕೇಳಿದ್ದಾರೆ. ಎಂತಹ ವಿಪರ್ಯಾಸ?

ಯಾವದೇ ಕಾಂಗ್ರೆಯೇತರ ಸರಕಾರಗಳನ್ನು ಉರಳಿಸುವ ಇಚ್ಛೆ ತನಗಿಲ್ಲವೆಂದು ಶ್ರೀಮಂತಿ ಗಾಂಧೀ ಪದೇ ಪದೇ ಸ್ಪಷ್ಟಪಡಿಸಿದ್ದಾರೆ. ಈ ಮಹಾತಾಯಿಗೆ ಅಪ್ಪಿತಪ್ಪಿ ಕೂಡ ನಿಜ ಹೇಳುವ ಅಭ್ಯಾಸವಿಲ್ಲ. ಕಾಂಗ್ರೆಯೇತರ ಸರಕಾರಗಳನ್ನು ಅದರಲ್ಲೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಸರಕಾರಗಳನ್ನು ಕಿತ್ತೊಗೆಯಲು 1980ರ ಫೆಬ್ರವರಿಯಿಂದ ಸತತ ಪ್ರಯತ್ನ ಶ್ರೀಮಂತಿ ಗಾಂಧಿ ಮಾಡುತ್ತಿದ್ದಾರೆ. ಆದರೆ ಒಂದೇ ಒಂದು ಕನಿಷ್ಟ ಕಾರಣವಾದರೂ ಅವರಿಗೆ ದೊರೆತಿಲ್ಲ. ಕಾರಣ ಭ್ರಮನಿರಸನಗೊಂಡ ಅವರು ನೇರವಾಗಿ ಪ. ಬಂಗಾಲದ ವಾಮಪಂಥೀಯ ಸರಕಾರದ ಮೇಲೆ ಯುದ್ಧ ಸಾರಿದ್ದಾರೆ.

ಏಪ್ರಿಲ್ 4, 1981ರಂದು ದೆಹಲಿಯಲ್ಲಿ ಕಾಂಗ್ರೆ ಪಕ್ಷದ ಮಹಿಳಾ ವಿಭಾಗದ ಪಾರ್ಲಿಮೆಂಟರಿ ಪಕ್ಷದ ಸಭೆಯಲ್ಲಿ ಮಾತನಾಡುತ್ತಾ ಶ್ರೀಮಂತಿ ಗಾಂಧಿಯವರು, ಚಳುವಳಿಗಳ ವಿರುದ್ಧ ಸಕ್ರಿಯ ವಿರೋಧವನ್ನು ವ್ಯಕ್ತಪಡಿಸಬೇಕೆಂದು ಕರೆ ನೀಡಿದ್ದಾರೆ. ಏಪ್ರಿಲ್ 7ರಂದು ಪ. ಬಂಗಾಲದ ಸರಕಾರದ ವಿರುದ್ಧ ಚಳುವಳಿಯನ್ನು ಮುಂದುವರೆಸಬೇಕೆಂದು ಪ. ಬಂಗಾಲದ ಕಾಂಗ್ರೆ ನಾಯಕರಿಗೆ ಕರೆ ನೀಡಿದ್ದಾರೆ.

ಪ್ರಧಾನಿಯ ಬೊಬ್ಬೆ

ಪ. ಬಂಗಾಲದಲ್ಲಿ ಕಾನೂನು ಪರಿಸ್ಥಿತಿ ಕುಸಿದಿದೆ' ಎಂದು ಪ್ರತಿದಿನ ಇಂದಿರಾಗಾಂಧಿಯವರು ಬೊಬ್ಬೆ ಹೊಡೆಯುತ್ತಿದ್ದಾರೆ. ಇವರಿಗೆ ಸುಬ್ರತೋ ಮುಖರ್ಜಿ, ಪಿ.ಸಿ ಸೇನ್, ಪ್ರಿಯರಂಜನ್‌ದಾಸ್ ಮುನ್ಸಿ ಮೊದಲಾದವರು ತಾಳಹಾಕುತ್ತಿದ್ದಾರೆ. ಎಡರಂಗ ಸರಕಾರ ಅಧಿಕಾರಕ್ಕೆ ಬಂದು ನಾಲ್ಕು ವರುಷಗಳಾದರೂ ಕಾನೂನು ಪರಿಸ್ಥಿತಿ ಹದಗೆಟ್ಟಿದೆ ಎಂದು ಹೇಳಲು ಶತ್ರುಗಳಿಗೂ ಸಾಧ್ಯವಾಗಿಲ್ಲ. ಕಮ್ಯುನಿಸಂನ ಕಡು ವಿರೋಧಿಗಳಾದ ಬಂಡವಾಳಶಾಹಿ ಪತ್ರಿಕೆಗಳೂ ಸಹ ಪ. ಬಂಗಾಳದಲ್ಲಿ ಕಾನೂನು ಪರಿಸ್ಥಿತಿ ಹದಗೆಟ್ಟಿದೆ ಎಂದು ಹೇಳುವ ಸಾಹಸ ಮಾಡಲಿಲ್ಲ. ಬದಲಾಗಿ 'ಇಂದು ಯಾವ ರಾಜ್ಯದಲ್ಲಾದರೂ ಕಾನೂನು ಪರಿಸ್ಥಿತಿ ಸುರಕ್ಷಿತವಾಗಿದೆ, ಪ್ರಜಾಪ್ರಭುತ್ವ ಹಕ್ಕುಗಳು ಸುರಕ್ಷಿತವಾಗಿವೆ ಮತ್ತು ಎಲ್ಲಾ ವಿಭಾಗದ ಜನತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ನಿರ್ಭೀತ ವಾತಾವರಣ ಇದೆ ಎಂದರೆ ಅದು ಪಶ್ಚಿಮ ಬಂಗಾಳ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಇತರ ರಾಜ್ಯಗಳಲ್ಲಿ' ಎಂದು ಬರೆದಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಎಡರಂಗ ಸರಕಾರದ ವಿರುದ್ಧ ಯಾಕೆ ಈ ಬೊಬ್ಬೆ? ಯಾಕೆಂದರೆ ಪ. ಬಂಗಾಳದ ಸರಕಾರ ತನ್ನ ಅಧಿಕಾರದ ಪೂರ್ತಿ ಅವಧಿ ಕಳೆದರೆ ಹೊಸದಾಗಿ ಚುನಾವಣೆ ನಡೆಯುತ್ತವೆ. ಚುನಾವಣೆಯಲ್ಲಿ ಅಧಿಕಾರಕ್ಕೆ ಬರಲು ಸಾಧ್ಯವೇ ಇಲ್ಲವೆಂಬ ನಗ್ನಸತ್ಯ ಪ್ರಧಾನಿಗೆ ಗೊತ್ತಿದೆ. ಅದಕ್ಕೆ ಶತಾಯ-ಗತಾಯ ಈ ಸರಕಾರವನ್ನು ಉರುಳಿಸಲೇಬೇಕು. ಎಂತಹ ಹೇಯ ಕೃತ್ಯ? ಕಾಂಗ್ರೆನಲ್ಲಿ ನಿಜವಾದ ಪ್ರಾಮಾಣಿಕರಿದ್ದರೆ ಈ ಕುಕೃತ್ಯಗಳಿಗೆ ನಾಚಿ ನೇಣು ಹಾಕಿಕೊಳ್ಳುತ್ತಿದ್ದರು.

30-3-81ರಂದು ಕಾಂಗ್ರೆನವರು ಮತಪ್ರದರ್ಶನವನ್ನು ಏರ್ಪಡಿಸಿದ್ದು ಯಾಕೆ? ಯಾವುದಾದರೂ ಕಾರ್ಮಿಕರ ಸಮಸ್ಯೆಯ ವಿರುದ್ಧವೇ? ಕೃಷಿ ಕೂಲಿಕಾರರ ವಿರುದ್ಧವೇ? ಬಡತನದ ವಿರುದ್ಧವೆ? ಮಧ್ಯಮ ವರ್ಗದ ಸಮಸ್ಯೆಯ ವಿರುದ್ಧವೇ? ಅಥವಾ ಆ ಮತಪ್ರದರ್ಶನಕ್ಕೆ ನಿರ್ದಿಷ್ಟವಾದ ಬೇಡಿಕೆಯೇನಾದರೂ ಇದ್ದಿತೇ? ಬೇಡಿಕೆ ಇತ್ತು, ಅದೇನೆಂದರೆ ಜ್ಯೋತಿ ಬಸು ಸರಕಾರ ರಾಜೀನಾಮೆ ನೀಡಬೇಕು. ಯಾಕೆ? 4 ವರ್ಷಗಳಾದರೂ ಗೋಳಿಬಾರ್ ನಡೆದಿಲ್ಲ; ಕಾರ್ಮಿಕರ ಹೋರಾಟದಲ್ಲಿ ಪೋಲೀಸರು ಮತ್ತು ಗೂಂಡಾಗಳು ಮಧ್ಯ ಪ್ರವೇಶಿಸಲು ಅವಕಾಶವಿಲ್ಲ; ಬಡ ಕೃಷಿ ಕೂಲಿಕಾರರ ಮತ್ತು ಬಡರೈತರ ಮೇಲೆ ಯಾವದೇ ದೌರ್ಜನ್ಯ ನಡೆಸಿಲ್ಲ; ವಿದ್ಯಾರ್ಥಿ ಯುವಜನರ ಸಮಸ್ಯೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ, ಸಾಧ್ಯವಾದ ಸೂಕ್ತ ಪರಿಹಾರ ಕೊಟ್ಟಿದೆ. ಕಾರಣ ಜ್ಯೋತಿ ಬಸು ಸರಕಾರ ರಾಜೀನಾಮೆ ಕೊಡಬೇಕು. ಇದು ಕಾಂಗ್ರೆನವರ ನಿಲುವು! ವಿರೋಧಿಗಳನ್ನು ಸದೆಬಡಿಯುವಲ್ಲಿ ಪಳಗಿದ ಜನರಲ್ ಜಿಯಾ ಕೂಡ ಕಾಂಗ್ರೆನವರ ಕೃತ್ಯಗಳಿಗಾಗಿ ನಾಚಬೇಕು.

30-3-81ರಂದು ಕಾಂಗ್ರೆನವರು ಶಾಂತಿಯುತವಾಗಿ ಪ್ರದರ್ಶನ ನಡೆಸುತ್ತೇವೆಂದು ಹೇಳಿ ಬಹಿರಂಗ ಸಭೆಯನ್ನು ಏರ್ಪಡಿಸಿದ್ದರು. ಸಭೆಯನ್ನುದ್ದೇಶಿಸಿ ಕಾಂಗ್ರೆ ಮುಖಂಡರು ಭಾಷಣ ಮಾಡಿದ ತಕ್ಷಣ, ಟ್ರಾಂಗಳಿಗೆ ಬೆಂಕಿ. ಸಾರಿಗೆ ಬಸ್ಸುಗಳಿಗೆ ಬೆಂಕಿ, ಕಲ್ಲು ತೂರಾಟ, ಜನಜೀವನವನ್ನು ಅಸ್ತವ್ಯಸ್ತಗೊಳಿಸಲು ಯತ್ನಿಸಲಾಯಿತು. ಗೋಳಿಬಾರ್ ಅನಿವಾರ್ಯವಾಯಿತು. ಬೆಂಗಳೂರಿನ ಎಚ್.ಎ.ಎಲ್. ಕಾಲೋನಿಯಲ್ಲಿ ಹಾಲುಕೊಳ್ಳುತ್ತಿದ್ದವರ ಮೇಲೆ ಗೋಳಿಬಾರ್ ಮಾಡಿ 3 ಜನರನ್ನು ಬಲಿತೆಗೆದುಕೊಂಡಿದ್ದು ಸರಿ ಎಂದು ಗುಂಡೂರಾಯರು ಹೇಳಿದಾಗ ಇದನ್ನು ಶ್ರೀಮಂತಿ ಗಾಂಧೀ ಸಮರ್ಥಿಸಿಕೊಂಡಿದ್ದು ಸರಿ ಎಂದಾದರೆ, ಕಲ್ಕತ್ತಾದಲ್ಲಿ 30-3-81ರಂದು ಪೋಲೀಸರು ಮಾಡಿದ್ದು ತಪ್ಪಿಲ್ಲವೆಂದು ಮಹಾತ್ಮಾಗಾಂಧೀ ಜೀವಂತವಿದ್ದರೆ ಅವರೂ ಒಪ್ಪಿಕೊಳುತ್ತಿದ್ದರು ಎಂಬುದರಲ್ಲಿ ಸಂಶಯವಿಲ್ಲ.

ಯಾಕೆ ಈ ನೀಚ ನಾಟಕ?

ಇಂದಿರಾಗಾಂಧೀಯರೇ! ಹಿಟ್ಲರ್ ಮತ್ತು ಮುಸೋಲನಿಯವರನ್ನು ಮೀರಿಸುವ ನಿಮ್ಮ ಕಮ್ಯುನಿಸ್ಟ್ ವಿರೋಧಿ ನಾಟಕಗಳನ್ನು ನಿಲ್ಲಿಸದಿದ್ದರೆ ಜನರು ನಿಲ್ಲಿಸುತ್ತಾರೆ. ಪಶ್ಚಿಮ ಬಂಗಾಲದ ಸರಕಾರವನ್ನಲ್ಲ, ಕೇಂದ್ರ ಸರಕಾರವನ್ನೇ ಜನ ಉರುಳಿಸುತ್ತಾರೆ. ಪ. ಬಂಗಾಳದಲ್ಲಿ ಕಾನೂನು ಪರಿಸ್ಥಿತಿ ಹದಗೆಟ್ಟಿಲ್ಲ. ಹದಗೆಟ್ಟಿರುವದು ನಿಮ್ಮ ಚಂಡಾಲ ಶಿಷ್ಯರ ಬುದ್ಧಿ ಮತ್ತವರ ಅಧಿಕಾರದಾಹ. ನೀವು ಇದನ್ನು ಹತೋಟಿಗೆ ತರದಿದ್ದರೆ ಜನ ತರುತ್ತಾರೆ.

ತಂತುರ್ಮವರದಿ ಬೇಕೆಂದು ಕೇಳಿದ್ದೀರಲ್ಲಾ? ನಿಮ್ಮ ಪಕ್ಷ ಸರಕಾರ ನಡೆಸುತ್ತಿರುವ ರಾಜ್ಯಗಳಲ್ಲಿ ಗೋಳಿಬಾರ್ ನಡೆದಿಲ್ಲವೇ? ಜನ ಸತ್ತಿಲ್ಲವೇ? ನಿಮ್ಮ ಪಕ್ಷದ ಮುಖಂಡ ಸುಬ್ರತೋ ಮುಖರ್ಜಿಯವರು ಸ್ವತಃ ಹೇಳಿದ್ದಾರೆ. ಏನೆಂದರೆ "ಬಂಗಾಲದಲ್ಲಿ ನಡೆಯುವ ಬಾಂಬ್ ಎಸೆದಾಡುವ 100 ಪ್ರಕರಣಗಳ ಪೈಕಿ ಶೇ. 90 ರಷ್ಟು ನಮ್ಮನಮ್ಮಲ್ಲಿ (ಕಾಂಗ್ರೆ ಗುಂಪುಗಳಲ್ಲಿ) ನಡೆಯುತ್ತವೆ" ಈ ವರದಿಯನ್ನು ತರಿಸಿಕೊಳ್ಳಿ.

ಇಂತಹ ನಾಟಕಗಳನ್ನು ನಿಲ್ಲಿಸದಿದ್ದರೆ ದೇಶದ ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಹೋರಾಟದ ಹಾದಿಯನ್ನು ಹಿಡಿಯಬೇಕಾಗುತ್ತದೆ. ಪ್ರಜಾಪ್ರಭುತ್ವ ರೀತಿಯಲ್ಲಿ ಅಧಿಕಾರಕ್ಕೆ ಬಂದ ಸರಕಾರ ಅವಧಿ ಪೂರ್ತಿ ಆಡಳಿತ ನಡೆಸುವದು ಅದರ ಹಕ್ಕು. ಅದನ್ನು ಬಿಟ್ಟು ಇಂತಹ ಹೇಯ ಕೃತ್ಯಗಳಿಗೆ ಇಳಿದರೆ ಪರಿಣಾಮ ಎದುರಿಸಬೇಕಾದೀತು!.

●

ತಂಬಾಕು ಬೆಳೆಗಾರರ ಹೋರಾಟ

ದೇಶದ ಹಲವಾರು ಭಾಗಗಳಲ್ಲಿ ಈ ಮುಂಚಿ ಪರಿಣಾಮಕಾರಿಯಾದ ರೀತಿಯಲ್ಲಿ ರೈತರ ಹೋರಾಟಗಳು ನಡೆದಿವೆ. ಆದರೆ ಹೋದವರ್ಷ ಮಲಪ್ರಭಾ ಆಯಕಟ್ಟಿನ ನರಗುಂದ-ನವಲಗುಂದ ರೈತರ ಹೋರಾಟ ಇಡೀ ದೇಶದ ಗಮನಸೆಳೆದಿದೆ. ನರಗುಂದ ಗೋಲೀಬಾರಿನ ಬೆಂಬಲಾರ್ಥ ಇಡೀ ಕರ್ನಾಟಕ ರಾಜ್ಯದಲ್ಲಿ ಹೋರಾಟನಡೆದು 24ಕ್ಕಿಂತಲೂ ಹೆಚ್ಚು ಜನ ಗೋಲೀಬಾರಿಗೆ ತುತ್ತಾಗಿ ಅಸುನೀಗಿದ್ದಾರೆ. ಗೋಲೀಬಾರಿನಿಂದ ಸತ್ತವರ ಸಂಖ್ಯೆಯಿಂದಾಗಿ ಈ ಹೋರಾಟಕ್ಕೆ ಚರಿತ್ರಾರ್ಹ ಮಹತ್ವ ಬಂದದ್ದಲ್ಲ. ಬೇರೆ ಹೋರಾಟಗಳಲ್ಲಿ ಇದಕ್ಕಿಂತಲೂ ಹೆಚ್ಚು ಜನ ಗೋಲೀಗೆ ತುತ್ತಾಗಿರುವುದೂ ಉಂಟು.

ರೈತರು ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆ ಸಿಗಬೇಕು, ರೈತರ ಸಾಲ ಮನ್ನಾ ಆಗಬೇಕು, ಶೇ. 4ರ ಬಡ್ಡಿಯಲ್ಲಿ ಹೊಸ ಸಾಲಸಿಗಬೇಕು, ನೀರಿನ ಕರ, ಅಭಿವೃದ್ಧಿ ತೆರಿಗೆಗಳೆಲ್ಲ ರದ್ದಾಗಬೇಕು - ಈ ಬೇಡಿಕೆಗಳು ಹಳ್ಳಿಗಾಡಿನ ರೈತರ ಗಮನಸೆಳೆದು, ಅವರನ್ನು ಹೋರಾಟದ ದಾರಿಗೆ ದೂಡಲು ಮುಖ್ಯ ಕಾರಣ. ಇದರ ಜೊತೆಯಲ್ಲೇ ಮತ್ತೊಂದು ವಿಷಯವನ್ನೂ ಗಮನಿಸಬೇಕಾದ್ದೇ. ಇಷ್ಟು ವರ್ಷ ಬೇರೆಬೇರೆ ರೈತಸಂಘಗಳು ಹೋರಾಟ ನಡೆಸುತ್ತ ಬಂದಿವೆ. ಆದರೆ ಗ್ರಾಮಾಂತರ ಪ್ರದೇಶದ ಸಿರಿವಂತ ಭೂಮಾಲಕರನ್ನೊಳಗೊಂಡು ಕೃಷಿಕಾರ್ಮಿಕರವರೆಗಿನ ಎಲ್ಲ ರೈತವರ್ಗಗಳನ್ನೊಳಗೊಂಡ ಹೋರಾಟಗಳು ನಡೆದಿರುವುದು ಕೆಲವೇ ಮಾತ್ರ. ಆದರೆ ಮಲಪ್ರಭಾ ಆಯಕಟ್ಟಿನ ಹೋರಾಟ ಎಲ್ಲಾ ವರ್ಗದ ರೈತರನ್ನೂ ಅಳವಡಿಸಿಕೊಂಡುದರಿಂದ ಆ ಹೋರಾಟಕ್ಕೆ ಹೆಚ್ಚಿನ ಬಲ-ಶಕ್ತಿ ತಂದುಕೊಳ್ಳಲು ಸಾಧ್ಯವಾಯಿತು. ಸಿರಿವಂತ ರೈತರ ಪ್ರಭಾವ ಇನ್ನೂ ಹಳ್ಳಿಗಾಡು ಪ್ರದೇಶಗಳಲ್ಲಿ ಜೀವಂತವಾಗಿರುವುದರಿಂದ ಈ ಹೋರಾಟದ ಪ್ರಭಾವ ಹೆಚ್ಚಾಗಲು ಕಾರಣವಾಯಿತು.

ನೀರಿನಕರ, ಭೂ ಅಭಿವೃದ್ಧಿ ತೆರಿಗೆ ನೀರಾವರಿ ಪ್ರದೇಶಕಷ್ಟೇ ಸೀಮಿತವಾಗಿದ್ದರೂ ಕೂಡ, ನರಗುಂದ ಬಂಡಾಯದ ಇತರ ಬೇಡಿಕೆಗಳು–ಬೆಳೆಗೆ ಯೋಗ್ಯಬೆಲೆ, ಸಾಲರದ್ಧತಿ, ಕಡಿಮೆ ಬಡ್ಡಿಯಲ್ಲಿ ಹೊಸಸಾಲ, ರಸಾಯನಿಕ ಗೊಬ್ಬರದ ಬೆಲೆಯಲ್ಲಿ ಕಡಿತ ಇವು ಇಡೀ ರೈತ ಜನಾಂಗ ಎದುರಿಸುತ್ತಿರುವ ಸಮಸ್ಯೆ. ಆದ್ದರಿಂದ ನರಗುಂದ ಹೋರಾಟಕ್ಕೆ ಚಾರಿತ್ರಿಕ ಮಹತ್ವ.

ನರಗುಂದ ಹೋರಾಟದ ಬಿಸಿ ಮಹಾರಾಷ್ಟ್ರಕ್ಕೂ ಹಬ್ಬಿತು. ಇತರ ಪ್ರಾಂತಗಳಿಗೂ ಹರಡುತ್ತಿದೆ.

ಈ ಹೋರಾಟದಿಂದ ಕಬ್ಬು, ಈರುಳ್ಳಿ ಮುಂತಾದ ಬೆಳೆಗಾರರಿಗೆ ಹೆಚ್ಚಿನ ಬೆಲೆ ಸಿಗುವಂತಾಯಿತು. ವಿದ್ಯುತ್ ಚಾಲಿತ ಪಂಪುಗಳ ಮೇಲಿನ ವಿದ್ಯುತ್ ರೇಟ್ ಕಡಿಮೆಯಾಯಿತು.

ಈ ಹೋರಾಟದಿಂದ ಸ್ಫೂರ್ತಿಗೊಂಡ ತಂಬಾಕು ಬೆಳೆಗಾರರೂ ಹೋರಾಟ ಪ್ರಾರಂಭಿಸಿದ್ದಾರೆ.

ಕರ್ನಾಟಕದಲ್ಲಿ ನಿಪ್ಪಾಣಿ-ಹುಕ್ಕೇರಿ ತಾಲ್ಲೂಕುಗಳಲ್ಲಿ ಅತಿ ಉತ್ತಮವಾದ ತಂಬಾಕು ಬೆಳೆಯಲಾಗುತ್ತಿದೆ. ಅದರಂತೆಯೇ ಈ ತಾಲ್ಲೂಕುಗಳಿಗೆ ಹೊಂದಿರುವ ಮಹಾರಾಷ್ಟ್ರ ಪ್ರದೇಶದಲ್ಲೂ ತಂಬಾಕು ಬೆಳೆಯುತ್ತಾರೆ. ರೈತರು ಬೆಳೆಯುತ್ತಿರುವ ಬೆಳೆಗಳಿಗೆ ಯೋಗ್ಯಬೆಲೆ ಸಿಗಬೇಕೆಂದು ಹೋರಾಟಮಾಡಿ ಕಬ್ಬು, ಈರುಳ್ಳಿಗಳಿಗೆ ಹೆಚ್ಚಿನ ಬೆಲೆ ಸಿಕ್ಕಿದ್ದರಿಂದ ತಂಬಾಕು ಬೆಳೆಗಾರರೂ ಹೋರಾಟ ನಡೆಸಿರುವುದು ಯೋಗ್ಯವೇ ಸರಿ.

ನರಗುಂದ ಹೋರಾಟದ ಅನುಭವ ಪಡೆದ ವಿರೋಧಿ ಪಕ್ಷದ ಮುಖಂಡರೂ, ರೈತಸಂಘದವರೂ ನಿಪ್ಪಾಣಿ ಪ್ರದೇಶದ ತಂಬಾಕು ಬೆಳೆಯುವ ರೈತರ ಸಂಘಟನೆಮಾಡಿ ಹೋರಾಡಬೇಕಾಗಿತ್ತು. ಅಂಥ ದೂರದರ್ಶತ್ವದ ಅಭಾವವೇ ನಾಗಪುರದ ಈರುಳ್ಳಿ ಬೆಳೆಗಾರರ ಮತ್ತು ನಿಪ್ಪಾಣಿ ತಂಬಾಕು ಬೆಳೆಗಾರರ ಹೋರಾಟವ ಮುಖಂಡತ್ವವನ್ನು ಶರದ ಜೋಶಿಯಂಥ ಸ್ವತಂತ್ರ ವ್ಯಕ್ತಿ ವಹಿಸಿಕೊಳ್ಳುವಂತಾಯಿತು. ರುದ್ರಪ್ಪ, ನಾರಾಯಣ ಸ್ವಾಮಿಯಂಥವರು ಮೇಲ್ವರ್ಗದ ರೈತರ ಹಿತರಕ್ಷಣೆ ಮಾಡುತ್ತಿದ್ದರೂ ಅವರ ಕೆಲವು ಬೇಡಿಕೆಗಳು ಎಲ್ಲ ವರ್ಗದ ರೈತರ ಬೇಡಿಕೆಗಳಾಗಿರುವುದರಿಂದ ಹೆಚ್ಚಿನ ರೈತರನ್ನು ಆಕರ್ಷಿಸಿದರೆ ಆಶ್ಚರ್ಯಪಡಬೇಕಾದ್ದಿಲ್ಲ. ಹಾಗೆಯೇ ಶರದಜೋಶಿಯಂಥವರು ನರಗುಂದ ಹೋರಾಟದ ಅನುಭವಗಳನ್ನು ಜೀರ್ಣಿಸಿಕೊಂಡು ಮಹಾರಾಷ್ಟ್ರದಲ್ಲಿ ಈರುಳ್ಳಿ ಬೆಳೆಗಾರರ, ಕರ್ನಾಟಕದಲ್ಲಿ ತಂಬಾಕು ಬೆಳೆಗಾರರ ಹೋರಾಟ ನಡೆಸಿದರೆ, ಅದು ಅವರ ತಪ್ಪಲ್ಲ, ಜನರ ಸಮಸ್ಯೆಗಳ ತೀವ್ರತೆಯು ಅರಿವನ್ನುಂಟುಮಾಡಿಕೊಳ್ಳಲು ತಡಮಾಡುತ್ತಿರುವ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ತಪ್ಪೆಂದು ಹೇಳಲೇ ಬೇಕಾಗುತ್ತದೆ.

ಕಬ್ಬು, ಈರುಳ್ಳಿ ಹಾಗೂ ಇತರ ದವಸಧಾನ್ಯಗಳ ಬೆಲೆ ನಿರ್ಧಾರ ಯಾವ ರೀತಿ ಕೆಲವೇ ಠೋಕ ವ್ಯಾಪಾರಿಗಳ ಮರ್ಜಿಯನ್ನು ಹೊಂದಿರುತ್ತದೋ, ಹಾಗೆಯೇ ನಿಪ್ಪಾಣಿ ಪ್ರದೇಶದಲ್ಲಿ ಅಲ್ಲದೇ ಬೇರೆಡೆಗಳಲ್ಲಿ

ಎನ್. ಕೆ. ಉಪಾಧ್ಯಾಯ

ಕೂಡ ತಂಬಾಕಿನ ಬೆಲೆಕೂಡ ಕೆಲವೇ ಗುತ್ತೇದಾರಿಗಳ ಹಿಡಿತದಲ್ಲಿರುತ್ತದೆ. ನಿಪ್ಪಾಣಿ-ಹುಕ್ಕೇರಿ ತಾಲ್ಲೂಕುಗಳ ಸಾವಿರಾರು ಎಕ್ರೆ ಭೂಮಿಯಲ್ಲಿ ಜಗತ್ಪಸಿದ್ಧ ತಂಬಾಕು ಬೆಳೆಗಾರರನ್ನು 5–6 ಜನ ಠೋಕ ವ್ಯಾಪಾರಿಗಳ ಸುಲಿಗೆಯಿಂದ ರಕ್ಷಿಸಿರಿ ಇದೊಂದೇ ನಿಪ್ಪಾಣಿ ತಂಬಾಕು ಬೆಳೆಯುವ ರೈತರ ಘೋಷಣೆ. ಸದ್ಯ ಒಂದು ಕೆ. ಜಿ. ತಂಬಾಕಿಗೆ ರೂ. 4 ರಿಂದ ರೂ. 8ರವರೆಗೆ ಸಿಗುತ್ತಿದ್ದು ಅದನ್ನು ರೂ. 10 ರಿಂದ ರೂ. 15ರ ವರೆಗೆ ಹೆಚ್ಚಿಸಬೇಕೆಂದೂ, ಠೋಕ ವ್ಯಾಪಾರಿಗಳು ಕಡಿಮೆ ತೂಕ, ಹಾಳು ತಂಬಾಕು ಮುಂತಾದ ನೆವ ಮುಂದೆ ಮಾಡಿ ರೈತರನ್ನೇನು ಸುಲಿಯುತ್ತಿದ್ದಾರೆ ಅದು ಬಂದಾಗಬೇಕೆಂದೂ, ತಮ್ಮ ಬೆಳೆಗೆ ವ್ಯಾಪಾರಸ್ಥರಿಂದ ನಗದು ಹಣ ಸಿಗಬೇಕೆಂದೂ ಇವರ ಬೇಡಿಕೆ. ತಂಬಾಕು ಬೆಳೆಗೆ ಹೆಚ್ಚು ಖರ್ಚಾಗುತ್ತಿರುವಾಗ, ಬೆಲೆಕೂಡ ಹೆಚ್ಚಾಗಬೇಕಾದದ್ದು ನ್ಯಾಯವೇ. ಗೊಬ್ಬರದ ಬೆಲೆ, ಬ್ಯಾಂಕ್ ಬಡ್ಡಿ, ನೀರಿನ ಕರ, ಡೀಜಲ್, ವಿದ್ಯುತ್ ಶುಲ್ಕ ಏರಿಕೆಯಾಗುತ್ತಿರುವಾಗ, ಕೂಲಿ ಹೆಚ್ಚು ಕೊಡಬೇಕಾಗಿ ಬಂದಾಗ, ತಂಬಾಕು ಬೆಳೆಗಾರರಿಗೂ ನ್ಯಾಯ ಬೆಲೆ ಸಿಗಲೇ ಬೇಕು. ತಂಬಾಕಿನ ಇಡೀ ವ್ಯಾಪಾರ 5-6 ಜನರದ್ದೇ ಗುತ್ತಿಗೆಯಾಗಿರುವಾಗ ಅವರು ತಮ್ಮ ಮನಬಂದಂತೆ ತಂಬಾಕಿನ ಬೆಲೆ ನಿರ್ಧರಿಸುತ್ತಾರೆ, ಅಲ್ಲದೇ ನಾನಾ ರೀತಿಯಿಂದ ಸುಲಿಯುತ್ತಿದ್ದಾರೆಂಬುದೂ ಸತ್ಯಸಂಗತಿ. ರೂ. 4ಕ್ಕೆ ರೈತರಿಂದ ಕೊಂಡುಕೊಂಡ ತಂಬಾಕನ್ನು ರೂ. 25ರಂತೆ ಬೀಡಿ ಕಾರ್ಖಾನೆ ಮಾಲಕರಿಗೆ ಮಾರಾಟ ಮಾಡುತ್ತಾರೆ. ಇದರಿಂದಾಗಿ ತಂಬಾಕು ಬೆಳೆಗಾರರಿಗೂ ಹಾನಿ, ಬೀಡಿ-ಸಿಗರೇಟು ಸೇದುವವರಿಗೆ ತುಟ್ಟಿಯಲ್ಲಿ ಅವುಗಳ ಮಾರಾಟ. ಬೆಳೆಗೂ, ಬೀಡಿ-ಸಿಗರೇಟು ಚಟಕ್ಕೂ ಸಂಬಂಧವಿಲ್ಲದ ಕೆಲವೇ ಜನ ಠೋಕ ವ್ಯಾಪಾರಿಗಳು ಅಪಾರ ಲಾಭಗಳಿಸುತ್ತಿದ್ದಾರೆ. ಇದು ಬಂದಾಗಬೇಕೆಂಬುದೇ ರೈತ ಚಳುವಳಿಯ ಬೇಡಿಕೆ.

ವ್ಯಾಪಾರಸ್ಥರಿಂದ ಹತ್ತಿ ಬೆಳೆಗಾರರಿಗೆ ಅನ್ಯಾಯವಾಗುತ್ತದೆಂದು ತಿಳಿದೇ, ಸರಕಾರದವರು ಹತ್ತಿ ಖರೀದಿ ಮಾಡಲಿಕ್ಕೊಂದು ನಿಗಮ ರಚಿಸಿದ್ದಾರೆ. ಈ ನಿಗಮದಿಂದ ರೈತರಿಗೆ ಸರಿಯಾಗಿ ನ್ಯಾಯಸಿಗದಿದ್ದರೂ ಕೂಡ, ಇಡೀ ಹತ್ತಿ ವ್ಯಾಪಾರ ಠೋಕ ವ್ಯಾಪಾರಿಗಳ ಅಂಕಿತದಲ್ಲಿರುವುದನ್ನು ತಪ್ಪಿಸಿದೆ. ಇದರಂತೆಯೇ ತಂಬಾಕು ಕೊಂಡುಕೊಳ್ಳಲು ಕೇಂದ್ರ ಸರಕಾರ ಒಂದು ನಿಗಮ ಸ್ಥಾಪಿಸಬೇಕೆಂದು ರೈತ ಚಳುವಳಿಯ ಬೇಡಿಕೆ. ಈ ನಿಗಮ ರಚಿಸಿದ್ದಾದರೆ, ರೈತರಿಂದ ತಂಬಾಕು ಕೊಂಡುಕೊಳ್ಳಲು ಈ ನಿಗಮಕ್ಕೆ ಕನಿಷ್ಟ 100-125 ಕೋಟಿ ರೂಪಾಯಿ ಬೇಕಾಗುತ್ತದೆಂದು ಕೇಂದ್ರ ಮಂತ್ರಿಯವರು ಲೋಕಸಭೆಯಲ್ಲಿ ಹೇಳಿಕೆ ನೀಡಿ, ಹಣದ ಅಭಾವದಿಂದ ಅಂಥ ನಿಗಮ ರಚಿಸಲು ಸಾಧ್ಯವಿಲ್ಲೆಂದು ಹೇಳಿದ್ದಾರೆ. ಠೋಕ ವ್ಯಾಪಾರಿಗಳಿಂದ ಸಾವಿರಾರು ರೈತರನ್ನು ರಕ್ಷಿಸುವುದು ಅಗತ್ಯವಿದೆಂದು ತಿಳಿದಾಗ ಒಂದು ನೂರು ಕೋಟಿ ಬಂಡವಾಳದಿಂದ ತಂಬಾಕು ಖರೀದಿಮಾಡಲು ಒಂದು ಸಂಸ್ಥೆ ಕಟ್ಟುವುದು ಸರಕಾರಕ್ಕೆ ಅಸಾಧ್ಯವೇನಲ್ಲ. ಆದರೆ ಠೋಕವ್ಯಾಪಾರಿಗಳ, ಕಳ್ಳಸಂತೆಕೋರರ ಹಿತಸಾಧಿಸುವ ಬಂಡವಾಳಶಾಹಿ ವರ್ಗದ ಇಂದಿರಾ ಸರಕಾರಕ್ಕೆ ಮಾತ್ರ ಇದು ಸಾಧ್ಯವಿಲ್ಲ.

ತಂಬಾಕು ಬೆಳೆಗಾರರ ಹೋರಾಟ ನ್ಯಾಯವಾದ ಬೇಡಿಕೆಗಳನ್ನು ಪಡೆಯಲು, ಕೆಲವೇ ಜನ ವ್ಯಾಪಾರಿಗಳ ಸುಲಿಗೆಯಿಂದ ವಿಮೋಚನೆಗೊಳ್ಳಲು ನಡೆಸಿದ ಚಳುವಳಿಯಾಗಿದೆ. ಈ ಹೋರಾಟವನ್ನು ಗೋಲೀಬಾರಿನಿಂದ, ದಬ್ಬಾಳಿಕೆಯಿಂದ ಕೊನೆಗೊಳಿಸಲು ಸಾಧ್ಯವಿಲ್ಲ. ಕಾರಣ ಸರಕಾರ ದಬ್ಬಾಳಿಕೆ ನೀತಿಯನ್ನು ಬಿಟ್ಟುಕೊಟ್ಟು, ತಂಬಾಕು ಬೆಳೆಗಾರರಿಗೆ ನ್ಯಾಯ ಸಿಗುವಂತೆ ಮಾಡುವುದು ಅತ್ಯಗತ್ಯ. ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಈ ಹೋರಾಟಕ್ಕೆ ಸಂಪೂರ್ಣ ಬೆಂಬಲನೀಡಿ, ಅವರಿಗೆ ಜಯ ಸಿಗುವಂತೆ ಮಾಡುವುದು ಆದ್ಯಕರ್ತವ್ಯ.

●

ತಂಬಾಕು ಬೆಳೆಗಾರರ ಸುಲಿಗೆಯ ಒಂದು ರೂಪ

ನಿಪ್ಪಾಣಿಯಲ್ಲಿ ತಂಬಾಕು ಖರೀದಿಮಾಡಲು ಬರೇ 5-6 ಜನ ಠೋಕ ವ್ಯಾಪಾರಿಗಳಷ್ಟೇ ಇದ್ದಾರೆ. 7ನೇಯವನಿಗೆ ತಂಬಾಕು ಖರೀದಿಮಾಡಲು ಹಕ್ಕಿಲ್ಲ.

ರೈತ ಬೆಳೆದ ತಂಬಾಕನ್ನು ವ್ಯಾಪಾರಿಗೆ ಕೊಡುತ್ತಾನೆ. ಹಣ ಪೂರ್ಣ ಸಿಕ್ಕಿತೆಂದು ರೈತನಿಂದ ಪಾವತಿ ಮೇಲೆ ಸಹಿ ಮಾಡಿಸಿಕೊಳ್ಳುತ್ತಾನೆ. ಆದರೆ ಹಣಕೊಡುವುದಿಲ್ಲ. ಸೀರೆ, ಬಟ್ಟೆ ಕೊಳ್ಳಲು ಹಣಬೇಕೆಂದು ಕೇಳಿದರೆ ತನ್ನ ಬಳಗದ ಬಟ್ಟೆ ಅಂಗಡಿಗೆ ಚೀಟಿಕೊಟ್ಟು ಕಳುಹಿಸುತ್ತಾನೆ. ಬಂಗಾರ (ಚಿನ್ನ) ಬೇಕೆಂದು ಕೇಳಿದರೆ, ಬಂಗಾರದ (ಚಿನ್ನ) ಅಂಗಡಿಕಡೆ ದಾರಿತೋರಿಸುತ್ತಾನೆ. ಕಾಳುಕಡ್ಡಿ ಮತ್ತಿನ್ನಿತರ ಸಾಮಾನುಗಳು ಬೇಕಾಗಿದ್ದರೆ, ತನ್ನದೇ ಆದ ಅಂಗಡಿಯಲ್ಲೇ ಕೊಳ್ಳಬೇಕು. ಹೀಗೆ ಒಬ್ಬ ರೈತನಿಗೆ ಹಣವಿಲ್ಲದೆ ಎಲ್ಲ ವಸ್ತುಗಳನ್ನೂ ಪೂರೈಸುತ್ತಾನೆ. ಅವುಗಳ ಬೆಲೆಯನ್ನೂ ತಾನೇ ನಿರ್ಧರಿಸುತ್ತಾನೆ. ಹೀಗೆ ತಂಬಾಕು ಬೆಳೆಗಾರರೆಲ್ಲಾ ಗುಲಾಮರಂತೆ ಜೀವನ ನಡೆಸಬೇಕಾಗಿದೆ ಈ 5-6 ಜನ ಠೋಕ ವ್ಯಾಪಾರಸ್ಥರ ಆಳಿಕೆಯಲ್ಲಿ. ಇದರ ವಿರುದ್ಧ ಈಗ ಹೋರಾಟ ನಡೆಯುತ್ತಿದೆ. 14 ಜನರ ಆಹುತಿಯಾಗಿದೆ. ಈ ಮಹಾಯಜ್ಞ ಕುಂಡಕ್ಕೆ ಇನ್ನೆಷ್ಟು ನರಬಲಿ ಬೇಕೋ ತಿಳಿಯದಾಗಿದೆ.

ಮೆರವಣಿಗೆ ಮೇಲೆ ಹಲ್ಲೆ

ದಿನಾಂಕ 6ರಂದು ನಿಪ್ಪಾಣಿ ತಂಬಾಕು ಬೆಳೆಗಾರರನ್ನು ಬಂಧಿಸಿದ 40 ಬಸ್ಸುಗಳು ಬಿಜಾಪುರದ ಮಾರ್ಗವಾಗಿ ಗುಲ್ಬರ್ಗ ಜೈಲಿಗೆ ಹೋಗುತ್ತಿದ್ದಾಗ, ಸಿ.ಪಿ.ಐ.(ಎಂ), ಸಿ.ಪಿ.ಐ., ಕಾಂಗ್ರೆಸ್(ಯು) ಕಾರ್ಯಕರ್ತರು ಘೋಷಣೆ ಕೂಗುತ್ತಾ ಅವರನ್ನೆಲ್ಲಾ ಸ್ವಾಗತಿಸಿ ಬಸವೇಶ್ವರ ಚೌಕದಲ್ಲಿ ಎಲ್ಲ ಸತ್ಯಾಗ್ರಹಿಗಳ ಸಾರ್ವಜನಿಕ ಸಭೆ ನಡೆಯಿತು. ಅದೇ ದಿನ ಮುಂಜಾನೆ ನಿಪ್ಪಾಣಿ ಗೋಳಿಬಾರಿನಲ್ಲಿ ಮೃತಪಟ್ಟವರಿಗೆ ಶ್ರದ್ಧಾಂಜಲಿಯನ್ನರ್ಪಿಸಿ, ಗೋಳಿಬಾರನ್ನು ಖಂಡಿಸಲಾಯಿತು. ಸಭೆಯನ್ನುದ್ದೇಶಿಸಿ ಕಾಂ. ಎನ್. ಕೆ. ಉಪಾಧ್ಯಾಯ, ಎಲ್. ಕೆ. ಚಂಚಲಕರ, ಪಾಯಣ್ಣವರ ಮತ್ತು ಕಾಂ. ಭೀಮಸಿ ಕಲಾದಗಿ ಮೊದಲಾದವರು ಮಾತನಾಡಿದರು.

ದಿನಾಂಕ 7ರಂದು ನಿಪ್ಪಾಣಿ ತಂಬಾಕು ಬೆಳೆಗಾರರ ಮೇಲೆ ನಡೆದ ಪೋಲೀಸ್ ದೌರ್ಜನ್ಯವನ್ನು ಖಂಡಿಸಿ, ಪ್ರತಿಭಟನಾರ್ಥವಾಗಿ ಬಿಜಾಪುರ ಬಂದ್ ಆಚರಿಸಲು ಹಾಗೂ ಬಸ್-ರೈಲ್ ರೋಕೋ ಕರೆಕೊಡಲಾಯಿತು. ಈ ಕಾರ್ಯಕ್ರಮದ ಅಂಗವಾಗಿ ಪ್ರಜಾಪ್ರಭುತ್ವ ಜನತಂತ್ರ ರಂಗದ ನೇತೃತ್ವದಲ್ಲಿ ಮೆರವಣಿಗೆ ಹೋಗುತ್ತಿದ್ದಾಗ ಕೆಲವು ಗೂಂಡಾಗಳು ಮೆರವಣಿಗೆ ಮೇಲೆ ಆಕ್ರಮಣ ಮಾಡಿದರು. ಕಾಂ. ಎನ್. ಕೆ. ಉಪಾಧ್ಯಾಯ, ಸೈಫನಸಾಬ ಇನಾಮದಾರ, ಬಸವರಾಜ ಮೊದಲಾದವರಿಗೆ ಪೆಟ್ಟು ಬಿದ್ದಿದೆ. ಆದರೂ ಧೃತಿಗೆಡದೆ ಮೆರವಣಿಗೆ ಮುಂದುವರೆದು ಬಸ್‌ಸ್ಟ್ಯಾಂಡಿನಲ್ಲಿ ಪಿಕೆಟಿಂಗ್ ನಡೆಸಿ ಎಲ್ಲ ಬಸ್‌ಗಳ ಸಂಚಾರ ಬಂದ್ ಮಾಡಲಾಯಿತು. ಮಧ್ಯಾಹ್ನ ಎಲ್ಲರನ್ನೂ ಬಂಧಿಸಲಾಯಿತು. ಬಂಧಿತರಲ್ಲಿ ಕಾಂ. ಭೀಮಸಿ ಕಲಾದಗಿ, ವಿಠ್ಠಲಸೊನ್ನದ, ಜಕ್ರಿಯಾ ಕಾಲೇಬಾಗ, ಸಾಕ್ರಿ, ಚಂಚಲಕರ, ದೇಸಾಯಿ, ಲಾಯದಗುಂದಿ ಮತ್ತು ತುಕಾರಾಂ ಚಂಚಲಕರ ಸೇರಿದ್ದಾರೆ.

●

ಪ್ರಜಾತಾಂತ್ರಿಕ ಹಕ್ಕುಗಳ ರಕ್ಷಣಾ ಸಮ್ಮೇಳನ

(1ನೇ ಪುಟದಿಂದ)

ಕಾರ್ಮಿಕರು ಒಗ್ಗಟ್ಟಾಗಿ ತಮ್ಮ ಹಾಗೂ ದುಡಿಯುವ ಜನತೆಯ ಹಿತಗಳ ರಕ್ಷಣೆಗಾಗಿ ಹೋರಾಡಲು ಸಿದ್ಧರಾಗಿರುವುದನ್ನು ಹೋರಾಟಗಳು ಬಂಡವಾಳಗಾರರಿಗೆ ಮನವರಿಕೆ ಮಾಡಿಕೊಡುತ್ತಿವೆ. ಸಮಸ್ಯೆಗಳನ್ನು ಬಗೆಹರಿಸುವ ಬದಲು ಜನತೆಯ ಧ್ವನಿಯನ್ನು ಮೂಕಗೊಳಿಸುವ ದಾರಿಯನ್ನು ಇಂದಿರಾ ಸರಕಾರ ಹಿಡಿದಿದೆ. ಕರ್ನಾಟಕದ ರೈತರು ತಾವು ಬೆಳೆದ ಬೆಳೆಗಳಿಗೆ ಯೋಗ್ಯಬೆಲೆ ಕೇಳಿದರೆ ಸರಕಾರವು 23 ರೈತರನ್ನು ಕೊಲ್ಲುವ ಮೂಲಕ ಉತ್ತರಕೊಟ್ಟಿತು. ಈ ಉತ್ತರವೇ ನರಗುಂದದಿಂದ ಬೆಂಗಳೂರಿಗೆ ಬಂದ ಅಮೋಘ ಜಾಥಾಕ್ಕೆ ಕಾರಣವಾಯಿತು. ಹಳ್ಳಿಯ ಬಡವರಿಗೆ ಕಾರ್ಮಿಕವರ್ಗವು ನೀಡಿದ ಮಹಾನ್ ಸ್ವಾಗತವನ್ನು ನಾವೀಗ ತೃಪ್ತಿಯಿಂದ ನೆನೆಯುತ್ತೇವೆ.

80 ದಿನಗಳ ಕಾಲ ನಡೆದ ಕೇಂದ್ರೋದ್ಯಮ ನೌಕರರ ಮುಷ್ಕರ ಮುರಿಯಲು ತೀವ್ರ ಯತ್ನಗಳನ್ನು ಮಾಡಲಾಯಿತು. ಖಾನ್ ವಾಯಕತ್ವದ ಇಂಟಕ್‌ನಲ್ಲಿರುವ ಆಳುವ ವರ್ಗದ ಬಾಡಿಗೆ ಜನರು ನಮ್ಮ ಐಕ್ಯತೆ ಮುರಿಯಲು ಎಲ್ಲ ಪ್ರಯತ್ನಗಳನ್ನು ಮಾಡಿದರು. ಡಿ. ರಾಜ್‌ಗೋಪಾಲರ ಮೇಲೆ ಹಲ್ಲೆಮಾಡಿದರು. ಇಂದಿಗೂ ಈ ದುಷ್ಕರ್ಮಿಗಳನ್ನು ದಸ್ತಗಿರಿ ಮಾಡಿಲ್ಲ. ಕೀಳು ಮಟ್ಟದ ಜಾತೀಯ ಮತ್ತು ಭಾಷಾವಾರು ದ್ವೇಷವನ್ನು ಪ್ರಚಾರಮಾಡಲು ನಗರದಲ್ಲಿ ಕರಪತ್ರ-ಭಿತ್ತಿಪತ್ರಗಳು ಕಾಣಿಸಿಕೊಂಡವು.

ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಕಚೇರಿಯನ್ನು ಕೆಲವೇ ಗೂಂಡಾಗಳು ಮುತ್ತಿದಾಗ ಪೋಲೀಸರು ಕಣ್ಮುಚ್ಚಿ ಆಳುವ ಪಕ್ಷದ ಕೈಗೊಂಬೆಗಳಂತೆ ನಡೆದುಕೊಂಡರು. ನಗರದಲ್ಲಿ ಆರು ತಿಂಗಳಿಂದ ಪೋಲೀಸ್ ರಾಜ್ಯ ನಡೆಯುತ್ತಿದೆ. ಕೇಂದ್ರೋದ್ಯಮಗಳ ಮುಷ್ಕರದ ಮೊದಲೇ 35ನೇ ವಿಧಿಯನ್ನು ಜಾರಿಗೊಳಿಸಿದ್ದು ಇನ್ನೂ ಜಾರಿಯಲ್ಲಿದೆ. ಖಾನ್ ಗೂಂಡಾಗಳ ಗುಂಪು ಹಾಗೂ ಆಳುವ ಪಕ್ಷದ ಕೈಗೊಂಬೆಗಳ ಗುಂಪುಗಳು ಮೈಕೋ ನೌಕರರ ಸಂಘ ಹಾಗೂ ಕಾಂಗ್ರೆಸ್ ಕಚೇರಿಗಳನ್ನು ಆಕ್ರಮಿಸಿಕೊಳ್ಳಲು ಸಹಾಯನೀಡಲು ಈ ವಿಧಿಯನ್ನು ಉಪಯೋಗಿಸಲಾಯಿತು.

ದೇಶದ ಎಲ್ಲ ಕಡೆಗಳಲ್ಲೂ ನಡೆಯುತ್ತಿರುವ ಕಾಳಸಂತೆಕೋರರ, ಗೂಂಡಾಗಳ, ಸಮಾಜವಿರೋಧಿ ಶಕ್ತಿಗಳ ಹಾಗೂ ಮಾನಭಂಗಮಾಡುವವರ ಹಾವಳಿಯನ್ನು ತಡೆಗಟ್ಟುವ ಬದಲು ಸರಕಾರವು ಪ್ರಜಾತಾಂತ್ರಿಕ ಜನರ ಮೇಲೆ ಧಾಳಿಮಾಡುತ್ತಿದೆ. ಕಳೆದ ವಾರ ಸಹ ಗುಂಡೂರಾಯರ ಮತ್ತು ಆಳುವ ಕಾಂಗ್ರೆಯ ನಾಯಕತ್ವದಲ್ಲಿ ಪೋಲೀಸರು ಮುಗ್ಧ ಜನರನ್ನು ನಿಪ್ಪಾಣಿಯಲ್ಲಿ ಬಲಿತೆಗೆದುಕೊಂಡಿದ್ದಾರೆ.

ಆದರೆ ಇವುಗಳು ನಮ್ಮನ್ನು ಅದುಮಿಡಲಾರವು. ಮುಂದಿನ ದಿನಗಳಲ್ಲಿ ತೀವ್ರವಾದ ಹಾಗೂ ಕಹಿಯಾದ ಹೋರಾಟಗಳು ನಮಗಾಗಿ ಕಾದಿವೆ. ಹಿಂದುಳಿದ ಜನರನ್ನು ಪೋಲೀಸ್ ದಬ್ಬಾಳಿಕೆಯಾಗಲೀ, ಪ್ರಭುತ್ವದ ಕ್ರೂರತೆಯಾಗಲೀ ಹಿಮ್ಮೆಟ್ಟಿಸಲಾಗದೆಂಬುದನ್ನು ಇತಿಹಾಸವು ತೋರಿಸಿಕೊಟ್ಟಿದೆ. ಪ್ರಭುತ್ವದ ಬಲವು ರಷ್ಯದ ಜಾರ್‌ರನ್ನಾಗಲೀ, ಇರಾನ್ ಷಾನನ್ನಾಗಲೀ, ನ್ಯಾಯಬೇಡಿದ ಜನತೆಯಿಂದ ಉಳಿಸಲಿಲ್ಲ.

ನಾವು ಮುನ್ನಡೆಯುತ್ತೇವೆ: ನಮ್ಮ ಸಾಲುಗಳು ಚಕ್ಯತೆಯಿಂದಾಗಿ ಹೆಚ್ಚುತ್ತವೆ. ಬಂದೂಕುಗಳು ಎಷ್ಟೇ ಇದ್ದರೂ ಅವು ನಮ್ಮ ನಾಡಿಗೆ ಸಮಾಜವಾದವನ್ನು ತರುವ ಹಾದಿಯಲ್ಲಿ ನಮ್ಮನ್ನು ತಡೆಯಲಾರವು.

"ಇನ್‌ಕ್ವಿಲಾಬ್-ಜಿಂದಾಬಾದ್"

●

ಏ. ೨೬ರಂದು ಬೆಂಗಳೂರಿನಲ್ಲಿ ಕಾರ್ಮಿಕರ ಸಮಾನೇಶ

(1ನೇ ಪುಟದಿಂದ)

ರಿಕೆಗಳಲ್ಲೂ 12ರೂ.ಗಳಂತೆ ಕನಿಷ್ಠ ಕೂಲಿ ಗೊತ್ತುಪಡಿಸಿ 1-1-81ರಿಂದ ಜಾರಿಗೆ ತರಬೇಕು. ಹಾಗೂ ವಾರದ ರಜಾದಿನಗಳಿಗೂ ಕನಿಷ್ಠಕೂಲಿ ನೀಡಬೇಕು.

2. ಈ ಕನಿಷ್ಠ ಕೂಲಿ ಹೆಚ್ಚಳವಾಗಿರುವ ಬೆಲೆ ಸೂಚ್ಯಂಕಕ್ಕೆ ಅನುಗುಣವಾಗಿರಬೇಕು.

3. ಕನಿಷ್ಠಕೂಲಿ ಶಾಸನದ ವ್ಯಾಪ್ತಿಯಲ್ಲಿ ಬರದ ಕೈಗಾರಿಕೆಗಳಿಗೂ ಕನಿಷ್ಠ ಕೂಲಿಯನ್ನು ವಿಸ್ತರಿಸಬೇಕು.

1981ರ ಮೇ ತಿಂಗಳಿನಲ್ಲಿ ಹೈದರಾಬಾದ್‌ನಲ್ಲಿ ನಡೆಯಲಿರುವ ದಕ್ಷಿಣ ವಲಯ ಸಮಾವೇಶಕ್ಕೂ ಈಗಿನಿಂದಲೇ ಸಿದ್ಧತೆಗಳು ನಡೆಯುತ್ತಿವೆ. ಅಸಂಖ್ಯಾತ ಅಸಂಘಟಿತ ಕಾರ್ಮಿಕರನ್ನು ಸಂಘಟಿಸುವುದು ಹೈದರಾಬಾದ್ ಸಮಾವೇಶದ ಉದ್ದೇಶಗಳಲ್ಲೊಂದು.

ಏಪ್ರಿಲ್ 26ರಂದು ಬೆಂಗಳೂರಿನಲ್ಲಿ ನಡೆಯಲಿರುವ ರಾಜ್ಯಮಟ್ಟದ ಸಮಾವೇಶಕ್ಕೆ ಎಲ್ಲ ಕಾರ್ಮಿಕ ಸಂಘಟನೆಗಳು ಸಹಕರಿಸಬೇಕೆಂದು ಸಿದ್ಧತಾ ಸಮಿತಿ ಮನವಿಮಾಡಿಕೊಂಡಿದೆ. ಈ ನಿಮಿತ್ತವಾಗಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದ್ದ ಸಿ.ಐ.ಟಿ.ಯು. ರಾಜ್ಯಸಮಿತಿಯ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್‌ರು ಈ ಅಂಶಗಳನ್ನು ತಿಳಿಸಿದರು.

ಗೋಲೀಬಾರ್ ಖಂಡನೆ

ನಿಪ್ಪಾಣಿ ತಂಬಾಕು ಬೆಳೆಗಾರರ ನ್ಯಾಯಯುತ ಹೋರಾಟವನ್ನು ಸದೆಬಡಿಯಲು ಪೋಲೀಸರು ಗೋಲೀಬಾರ್‌ಮಾಡಿ ಅನೇಕ ಜನರನ್ನು ಬಲಿತೆಗೆದುಕೊಂಡಿದ್ದನ್ನು ಸೂರ್ಯನಾರಾಯಣರಾವ್‌ರು ಉಗ್ರವಾಗಿ ಖಂಡಿಸಿದ್ದಾರೆ.

ತನ್ನ ಧೋರಣೆಗಳನ್ನು ಬದಲಾಯಿಸಿಕೊಳ್ಳದಿದ್ದರೆ ರೈತರ ಹೋರಾಟಗಳಲ್ಲಿ ಕಾರ್ಮಿಕರೂ ಭಾಗಿಯಾಗಬೇಕಾಗಿಬರಬಹುದೆಂದು ಎಚ್ಚರಿಸಿದ್ದಾರೆ.

●

ಎಲ್ಲೈಸಿ ಕಾರ್ಮಿಕರ ವಿಜಯ : ನೌಕರರ ಪರ ಸುಪ್ರೀಂ ಕೋರ್ಟಿನ ತೀರ್ಪು

ಬೋನಸ್ಸು ಮತ್ತು ತುಟ್ಟಿಭತ್ತೆಯನ್ನು ಕಡಿತಗೊಳಿಸುವುದು, ಸಾಮೂಹಿಕ ಚೌಕಾಶಿಯ ಹಕ್ಕನ್ನು ಕಿತ್ತುಕೊಳ್ಳುವ ಎಲ್ಲೈಸಿ (ತಿದ್ದುಪಡಿ) ಮಸೂದೆಯ ವಿರುದ್ಧ ಎಲ್ಲೈಸಿ ನೌಕರರು ಏಪ್ರಿಲ್ 2ರಿಂದ ಅನಿರ್ದಿಷ್ಟಾವಧಿ ಮುಷ್ಕರ ಹೂಡಿದ್ದರು. ಬೋನಸ್ಸಿಗೆ ಸಂಬಂಧಿಸಿದ 1974ರ ಒಪ್ಪಂದದ ಷರತ್ತುಗಳನ್ನು ಸುಪ್ರೀಂ ಕೋರ್ಟು ಎತ್ತಿಹಿಡಿದಾಗ ಎಲ್ಲೈಸಿ ಆಡಳಿತವರ್ಗ ತನ್ನ ನೌಕರರಿಗೆ 1981 ಏಪ್ರಿಲ್ 15ರೊಳಗೆ ಬೋನಸ್ ಪಾವತಿಮಾಡುವುದು ಎಂದು ಅಟಾರ್ನಿ ಜನರಲ್ ಆಶ್ವಾಸನೆ ನೀಡಿದ್ದರು.

ಸುಪ್ರೀಂ ಕೋರ್ಟು ನೀಡಿದ ಆಜ್ಞೆಯ ತಡೆಗೆ ಕೇಂದ್ರಸರಕಾರ ಮನವಿ ಸಲ್ಲಿಸಿ ತಿರಸ್ಕೃತವಾದಾಗ ಕೋರ್ಟಿನ ನಿರ್ಧಾರವನ್ನು ಅನೂರ್ಜಿತಗೊಳಿಸಲು ಸರಕಾರ ಕರಾಳ ಮಸೂದೆಯನ್ನು ಹೊರಡಿಸಿತ್ತು. ನೌಕರರು ಈ ಮಸೂದೆಯ ವಿರುದ್ಧ ಎಲ್ಲೈಸಿ ಆಡಳಿತ ವರ್ಗ ಮತ್ತು ಸರಕಾರದ ವಿರುದ್ಧ ರಿಟ್ ಹೋಗಿದ್ದರು.

15-4-81ರಂದು ಒಂದು ವಾರದೊಳಗಾಗಿ ಎಲ್ಲೈಸಿ ನಿಗಮದ ಮೂರು ಮತ್ತು ನಾಲ್ಕನೇ ದರ್ಜೆ ನೌಕರರಿಗೆ ಶೇ. 15ರಷ್ಟು ಬೋನಸ್ಸು ಹಾಗೂ ಪಾವತಿಯಿರುವ ದಿನದಿಂದ ಅದಕ್ಕೆ ಶೇ. 12ರಷ್ಟು ಬಡ್ಡಿಸಮೇತ ನೀಡಬೇಕೆಂದು ಸುಪ್ರೀಂಕೋರ್ಟು ಆದೇಶ ನೀಡಿದೆ. ಈ ಹಿನ್ನೆಲೆಯಲ್ಲಿ ಮುಷ್ಕರ ನಿಲುಗಡೆಯಾಗಿದೆ.

ಬೋನಸ್ಸು ವಿವಾದದ ಬಗ್ಗೆ ಮುಷ್ಕರ ಹೂಡಿದ್ದ ನೌಕರರಿಗೆ ಸುಪ್ರೀಂಕೋರ್ಟು ಆದೇಶ ವಿಜಯ ತಂದಿದೆ.

●

ಕುದುರೆಮುಖ ಕಾರ್ಮಿಕರಿಗೆ ತುರ್ತು ಸಹಾಯ ಕಳುಹಿಸಲು ಮನವಿ

ಪಶ್ಚಿಮ ಘಟ್ಟದ ಪರ್ವತ ಶ್ರೇಣಿಯಲ್ಲಿ ಪ್ರಸಿದ್ಧ ಶಿಖರ ಕುದುರೆಮುಖದ ಮಲ್ಲೇಶ್ವರದಲ್ಲಿ ಎಚ್.ಎಸ್.ಸಿ.ಎಲ್. ಕಂಪೆನಿಯ ಕಾರ್ಮಿಕರು ದೀರ್ಘ ಕಾಲದ ಹೋರಾಟ ನಡೆಸುತ್ತಲಿದ್ದಾರೆ. ನೂರಾರು ಕಾರ್ಮಿಕರನ್ನು ಅನ್ಯಾಯವಾಗಿ ರಿಟ್ರೆಂಚ್ ಮಾಡಿದುದರ ವಿರುದ್ಧದ ಹೋರಾಟವು ಇದೀಗ ಸುಮಾರು ಇನ್ನೂರು ದಿನಗಳನ್ನು ಸಮೀಪಿಸುತ್ತಿದೆ. ಸುಮಾರು ಐವತ್ತನಾಲ್ಕು ಮಂದಿ ಕಾರ್ಮಿಕರು ಒಂದು ತಿಂಗಳಿಂದ ಬೆಳಗಾವಿ ಜೈಲಿನಲ್ಲಿದ್ದಾರೆ. ನೂರಾರು ಕಾರ್ಮಿಕರು ಮತ್ತು ಅವರ ಕುಟುಂಬದವರು ದಿನಕ್ಕೆ ಒಂದು ತುತ್ತು ಅನ್ನ ಸಿಗದೆ ಬೀದಿಯಲ್ಲಿ ಬಿದ್ದಿರುವರು.

ಕಾರ್ಮಿಕರ ಹೋರಾಟ ನಡೆಯುತ್ತಿದ್ದಂತೆಯೇ ಇದೀಗ ಕುದುರೆಮುಖದಲ್ಲೂ, ಇದೇ ಕಂಪನಿಯಲ್ಲಿರುವ ಬೇರೆಬೇರೆಡೆಗಳಲ್ಲೂ ನೂರಾರು ಮಂದಿಯನ್ನು ರಿಟ್ರೆಂಚ್ ಮಾಡಲಾಗಿದೆ. ಉಸಿರಿರುವ ತನಕ ಹೋರಾಟ ಮಾಡುವ ದೃಢತೆ ಮತ್ತು ಅಚಲ ವಿಶ್ವಾಸದಿಂದ ಅತ್ಯಂತ ಕಷ್ಟದ ಪರಿಸ್ಥಿತಿಯನ್ನು ಎದುರಿಸಿ ಕಾರ್ಮಿಕರು ಹೋರಾಟವನ್ನು ಮುನ್ನಡೆಸುತ್ತಲಿದ್ದಾರೆ. ರಾಷ್ಟ್ರಮಟ್ಟದಲ್ಲೂ ಸೌಹಾರ್ದ ದೊರೆತಿದೆ. ರಾಜ್ಯದ ಎಲ್ಲೆಡೆಗಳಲ್ಲೂ ಈ ಧೀರ ಕಾರ್ಮಿಕರ ಹೋರಾಟದ ಕೂಗು ಕೇಳುವಂತಾಗಬೇಕಾಗಿದೆ.

ಅತ್ಯಂತ ಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿರುವ ಈ ಕಾರ್ಮಿಕ ಬಾಂಧವರಿಗೆ ಮತ್ತವರ ಕುಟುಂಬದವರಿಗೆ ಸಹಾಯವಿತ್ತು, ಹೋರಾಟವನ್ನು ಜಯಗಳಿಸುವ ತನಕ ಮುನ್ನಡೆಸಲು ನಾವೆಲ್ಲಾ ಮುಂದಾಗಬೇಕು. ಹೋರಾಟದಲ್ಲಿರುವ ಈ ಬಾಂಧವರಿಗೆ ಸಹಾಯ ನೀಡಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರತಿಯೊಬ್ಬ ಸದಸ್ಯನಿಂದ ಕನಿಷ್ಠ ಒಂದು ರೂಪಾಯಿಯನ್ನಾದರೂ ಸಂಗ್ರಹಿಸಿ ಜಿಲ್ಲಾ ಸಮಿತಿ ಅಥವಾ ಸ್ಥಳೀಯ ಸಮಿತಿಗಳ ಮೂಲಕ ರಾಜ್ಯಸಮಿತಿ ಕಾರ್ಯದರ್ಶಿಯವರಿಗೆ 1981 ಏಪ್ರಿಲ್ ಕೊನೆಯೊಳಗೆ ಕಳುಹಿಸಿಕೊಡುವಂತೆ ಪಕ್ಷದ ರಾಜ್ಯಸಮಿತಿ ಸೆಕ್ರೆಟಾರಿಯೆಟ್ ವಿನಂತಿಸುತ್ತದೆ. ಪಕ್ಷದ ಜಿಲ್ಲಾಸಮಿತಿ, ಸ್ಥಳೀಯ ಸಮಿತಿ ಮತ್ತು ಶಾಖೆಗಳು ಅತ್ಯಂತ ಹೆಚ್ಚಿನ ಮುತುವರ್ಜಿಯಿಂದ ಈ ಕೆಲಸವನ್ನು ನೆರವೇರಿಸುವಂತೆಯೂ, ಪಕ್ಷದ ಹಿತೈಷಿಗಳಿಂದಲೂ, ಸಾಮೂಹಿಕ ಸಂಘಟನೆಗಳಿಂದಲೂ ತುರ್ತಿನ ಸಹಾಯ ದೊರೆಯುವಂತೆ ಮಾಡಲೂ ಸೆಕ್ರೆಟಾರಿಯೆಟ್ ವಿನಂತಿಸುತ್ತದೆ.

ಎಂ. ಕೆ. ಭಟ್
ಸಿ. ಪಿ. ಐ. (ಎಂ) ರಾಜ್ಯಸಮಿತಿ ಕಾರ್ಯದರ್ಶಿ

ಸಂಪಾದಕೀಯ

(1ನೇ ಪುಟದಿಂದ)

ಸಿ.ಪಿ.ಐ.(ಎಂ), ಕಾಂಗ್ರೆಸ್ (ಯು)ನಂತಹ ರಾಜಕೀಯ ಪಕ್ಷಗಳು ಭಾಗವಹಿಸಿರುವ ಸಮಾವೇಶವು ಜನತಂತ್ರದ ಮೇಲೆ ನಡೆಯುವ ಧಾಳಿಗಳನ್ನು ಒಕ್ಕೊರಲಿನಿಂದ ಖಂಡಿಸಿದೆಯಲ್ಲದೆ, ಎಲ್ಲಾ ಜನತೆ ಒಂದಾಗಿ ಹೋರಾಡಲೂ ಕರೆ ಇತ್ತಿದೆ. ಕಾಂಗ್ರೆಯೇತರ ರಾಜ್ಯಸರಕಾರವನ್ನು ಉರುಳಿಸುವ ಇಂದಿರಾ ಸರಕಾರದ ಪ್ರಯತ್ನವನ್ನು ಖಂಡಿಸಿದೆ.

ಬೆಂಗಳೂರಿನ ಸಮಾವೇಶವು ಅಲ್ಲಿಗೇ ಸೀಮಿತವಾಗಿರಬಾರದು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಇದನ್ನು ಸಂಘಟಿಸಲು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಮುಂದಾಗಬೇಕು. ಜನರಲ್ಲಿ ಪ್ರಜ್ಞೆ ಮೂಡಿಸಲು ಮತ್ತು ಜನತಂತ್ರದ ರಕ್ಷಣೆಗಾಗಿ ಹೋರಾಡಲು ಸಂಘಟಿತ ಚಳುವಳಿ ನಡೆಸಲು ತುರ್ತಾಗಿ ಮುಂದಾಗಬೇಕು. ರಾಜ್ಯದಲ್ಲಿ ನಮ್ಮ ಹಕ್ಕುಗಳನ್ನು ಉಳಿಸುವುದು ಮತ್ತು ರಾಷ್ಟ್ರದಾದ್ಯಂತ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಮಾಡುವ ಕಾರ್ಯದಲ್ಲಿ ನಾವೆಲ್ಲಾ ಧುಮುಕಬೇಕು. ಕಾಂಗ್ರೆ ಸರಕಾರದ ದುಷ್ಟಯೋಜನೆಗಳನ್ನು ವಿಫಲಗೊಳಿಸಬೇಕು. ○

ವಿವಾಹದ ನೆನಪಿಗೆ ಕಾಣಿಕೆ

ಬಂಟ್ವಾಳ ತಾಲೂಕಿನ ಪಿಟ್ಲದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಾಖೆಯ ಕಾರ್ಯದರ್ಶಿ ಕಾಂ. ವಿ. ಅಬ್ದುಲ್‌ರಹಮಾನರು ಆಯಿಷಬಾನುರೊಂದಿಗೆ 5-4-81 ರಂದು ವಿವಾಹವಾದರು. ಈ ಶುಭಕಾರ್ಯಕ್ರಮದ ನೆನಪಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಂಟ್ವಾಳ ತಾಲೂಕು ಸಮಿತಿಗೆ 21 ರೂ ಕೊಟ್ಟಿದ್ದಾರೆ. ಸಮಿತಿಯು ನವದಂಪತಿಗಳಿಗೆ ಶುಭಕೋರಿದೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24464
EDITOR : M. K. BHAT